# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XIV 2 ಮಾರ್ಚ್ 1996

ಈ ಸಂಚಿಕೆಯಲ್ಲಿ


ಮುಂಬಯಿಯಲ್ಲಿ "ಕನ್ನಡ"ದ ಭವಿಷ್ಯ ● ಪ್ರೊ. (ಶ್ರೀಮತಿ) ಸುನೀತಾ ಶೆಟ್ಟಿ 2

ಮುಂಬಯಿ ಮೈಸೂರು ಅಸೋಸಿಯೇಷನ್ ಒಂದು ಸವಿ ನೆನಪು ● ಬಿ. ಗೋಪಾಲಯ್ಯ 3

ಶಿಕ್ಷಣ ತಜ್ಞೆ ಡಾ| ಉಷಾ ಎಸ್. ರಾವ್ ಅವರೊಂದಿಗೆ ಸಂದರ್ಶನ ● ರೇಖಾ 4

"ರಾಮಾಯಣ ದರ್ಶನ"ದಲ್ಲಿ ಮಹೋಪಮೆ ● ಡಾ| ತಾಳ್ತಜೆ ವಸಂತ ಕುಮಾರ 5

ಕಂಪ್ಯೂಟರ್

ತೀರಿ ಹೋದ ನರ್ಗಿಸ್, ರಾಜಕಪೂರ್ ನಟಿಸಲಿರುವ ಚಲನಚಿತ್ರಗಳನ್ನು ಮತ್ತೆ ನೋಡುವೆವೆ?

ಕೃತಕ ನಟನಟಿಯರು ಸಾಧ್ಯವೇ? ● ಇಂದಿರ ಮೂರ್ತಿ 6

**Lord Chaitanya Mata Prabhu - The Golden Avatara** 7

**AN EPISODE** ● Nadigar Govinda Rao 8

ಕರ್ನಾಟಕ ಸಂಗೀತಕ್ಕೆ ಸಂತ ಪುರಂದರದಾಸರ ಕೊಡುಗೆ ● ಸಿ. ಕೆ. ಶಂಕರನಾರಾಯಣ ರಾವ್ 9

**SKIING AT AULI** ● Chetan Prasad 11

ಸಂಮೋಹಿನಿ ಚಿಕಿತ್ಸೆ (1) ● ಡಾ| ಉಷಾ ರಾವ್ 13

ಸುತ್ತ ಮುತ್ತ 14

ಚುಟುಕುಗಳು 10 & 15



**The Mysore Association, Bombay**

393, Bhaudaji Road, Matunga, Bombay 400 019.

[redacted] Tel.: 402 46 47 Grams: "KARUNADU"

# ಮುಂಬಯಿಯಲ್ಲಿ "ಕನ್ನಡ"ದ ಭವಿಷ್ಯ

● ಪ್ರೊ. (ಶ್ರೀಮತಿ) ಸುನೀತಾ ಶೆಟ್ಟಿ

ಮುಂಬಯಿಯಲ್ಲಿ ಕನ್ನಡ ಪತ್ರಿಕೆಗಳ ಸುಗ್ಗಿ! ಇವುಗಳಿಗೆ ಪೂರಕವಾಗಿ ಎರಡು ದಿನಪತ್ರಿಕೆಗಳು ಈಗಾಗಲೆ ಬೆಳಕು ಕಂಡು ಯುವ ಬರಹಗಾರರನ್ನು ಆಕರ್ಷಿಸುತ್ತಿರುವ ಈ ಸಂತೋಷದ ಸಂದರ್ಭದಲ್ಲಿ, ಕನ್ನಡದ ಬಗ್ಗೆ ಭವಿಷ್ಯ ನುಡಿಯಲು ನನಗೆ ಜ್ಯೋತಿಷ್ಯ ಶಾಸ್ತ್ರದ ಜ್ಞಾನವೂ ಇಲ್ಲ, ಶಕುನ ನುಡಿಯುವ `ನರ್ಸಣ್ಣ'ನೂ ಇಲ್ಲ.

ಆದರೂ `ಕನ್ನಡ'ದ ಬಗೆಗೆ ಬರೆಯಬೇಕಾಗಿ ಬಂದದ್ದರಿಂದ ಆ ಶಬ್ದವನ್ನು ಅವತರಣ ಚಿಹ್ನೆಯೊಳಗೇ ಸುರಕ್ಷಿತವಾಗಿ ಇಟ್ಟಿದ್ದೇನೆ. ಈ ನಗರದಲ್ಲಿ, ಏನೇ ನಡೆಯಲಿ, ಕನ್ನಡವಂತೂ ಕಂಸದೊಳಗೇ ಇದ್ದು ಕಣ್ಣು ಮಿಟುಕಿಸುತ್ತ ಇರುತ್ತದೆ. ಆ ನೆಲೆಯಿಂದ ಹೊರಬರಲು ಅದಕ್ಕೆ ಧೈರ್ಯವಾದರೂ ಎಲ್ಲಿಂದ? ಹೀಗಾಗಿ ಕನ್ನಡದ ಮಟ್ಟಿಗೆ ಈ ನಗರದಲ್ಲಿ, ಬರೆಯುತ್ತಲೇ ಇರಬೇಕಾಗುತ್ತದೆಯೆಂದು ನನ್ನ ಅನಿಸಿಕೆ. ಏಕೆಂದರೆ `ಕನ್ನಡ' ನಮಗೆ ಬೇಕಾದದ್ದು!

ಈಗೊಂದು ದಶಕದ ಆಗು ಹೋಗುಗಳನ್ನಷ್ಟೇ ಅವಲೋಕಿಸೋಣ. ಕನ್ನಡವನ್ನು ಉದ್ಧಾರ ಮಾಡಲು ಯತ್ನಿಸಿದ ದಿನಗಳಾವುವು? ಸಂಘ-ಸಂಸ್ಥೆಗಳು ಕನ್ನಡದ ಬಗೆಗೆ ಮಾತಾಡದ ಸಮಾರಂಭಗಳು ಇದ್ದುವೇ? ಸುದೈವವಶಾತ್ ಈಗಲು ಇಂಥ ಪ್ರೀತಿಯ ಮಹಾಪೂರ ಸಭಿಕರನ್ನು ತನ್ಮಯಗೊಳಿಸುವುದಿಲ್ಲವೇ? ಆದರೆ ಇನ್ನೂ ನಮ್ಮ ಕಾಳಜಿ ಭೂತದಂತೆ ಕಾಡುವುದರ ಹಿನ್ನೆಲೆ ಯಾವುದು? ಕೆಲವೇ ಜನರ ಕಳಕಳಿಯೇ ಇದು? ಹಾಗಿದ್ದರೆ ವಿಸ್ತಾರವಾದ ಈ ನಗರದಲ್ಲಿ ಯಾರು ಯಾರಿಗೆ ಹೇಳಿಕೊಳ್ಳುವುದು?

ಪಶ್ಚಿಮ ರೈಲ್ವೆಯ ಎಲ್ಲ ನಿಲ್ದಾಣಗಳಲ್ಲಿ, ಕನ್ನಡ ಸ್ನೇಹಿತರು ದೊರಕುತ್ತಾರೆ. ಹರಕು ಮುರುಕೇ ಆಗಲಿ ನನಗೂ ಕನ್ನಡ ಬರುತ್ತದೆಯೆಂದು ತೋರಿಸಿಕೊಟ್ಟು ಕನ್ನಡದ ಬಗೆಗಿನ ನಿಮ್ಮ ಚಿಂತೆಯನ್ನು ಕಡಿಮೆ ಮಾಡುತ್ತಾರೆ. ನೀವು ಕೊರೆಯುತ್ತ ಇದ್ದರೆ ಅವರು ಬಾಯಿ ತೆರೆದು ಕೇಳುತ್ತಾರೆ, ಮುಂದೆ ಕಾಲಗರ್ಭದಲ್ಲಿ ಅಡಗಿ ಹೋಗುತ್ತಾರೆ. ತಮ್ಮ ಮಕ್ಕಳನ್ನು ಜನದಟ್ಟನೆಯ ರೈಲಿನಡಿಗೆ ನೂಕಲು ಮನಸ್ಸಿಲ್ಲದ ಕನ್ನಡ ತಾಯಿ-ತಂದೆ ಮಕ್ಕಳಿಗೆ ಮಧ್ಯಾಹ್ನದ ಬುತ್ತಿ ಹೊತ್ತಾದರೂ, ಎರಡೆರಡು ಪಾಳಿ ಮಾಡಬೇಕಾಗಿ ಬಂದರೂ ಸಿಕ್ಕಿದ ಭಾಷೆ ಕಲಿಸಿ ತಾವು ಮಾತ್ರ ಕನ್ನಡಕ್ಕೆ ವಿದಾಯ ಹೇಳದೆ ಕಾದಂಬರಿ ಓದುತ್ತ ಕನ್ನಡದ ಪ್ರೀತಿಯನ್ನು ಉಳಿಸಿಕೊಂಡು ಬಂದಿದ್ದಾರೆ. ಇವರನ್ನ `ಕನ್ನಡ ದ್ರೋಹಿ'ಗಳೆಂದು ಯಾವ ನಾಲಿಗೆಯಲ್ಲಿ ಹೇಳುವಿರಿ?

`ಸೆಂಟ್ರಲ್ ರೈಲ್ವೆ' ಒಂದು ಮಿನಿ ಜಗತ್ತು. ಭಿಕ್ಷುಕರಿಂದ ಹಿಡಿದು ತರಕಾರಿ, ಮೀನು, ಫ್ಯಾಶನ್ ತೊಡುಗೆ, ಇಸ್ಪೀಟಾಟ, ರಾಜಕೀಯದ ಕಸರತ್ತು ಈ ವ್ಯವಹಾರದಲ್ಲೆ ಮುಳುಗೇಳುವ ಜನರ ನಡುವೆ ಕನ್ನಡ ಮಾತಾಡಬೇಕೆಂದರೂ ಅವಕಾಶ ಸಿಗದು. ಇಲ್ಲಿ ಪ್ರತಿ ಹತ್ತು ಮಂದಿಗೊಬ್ಬ ಕನ್ನಡಿಗ ಸಿಗುತ್ತಾನೆ. ಆದರೆ ಎಂದೋ ಮುಂಬಯಿಯ ಮಣ್ಣಿನ ವಾಸನೆಗೆ ಮಾರು ಹೋದ ಆತ ಹಿಂದಿ ಯಾ ಮರಾಠಿಗೇ ಹೆಚ್ಚು ಶರಣು ಹೋಗುತ್ತಾನೆ. ಸ್ವಚ್ಛ ಬಟ್ಟೆ ತೊಟ್ಟವನು `What happened you know?' (ಏನು ಸಂಭವಿಸಿತು ನಿನಗೆ ಗೊತ್ತೆ?) ಎಂದು ಹುಬ್ಬೇರಿಸಿ ನಮ್ಮನ್ನೇ ದಿಗಿಲು ಬೀಳಿಸುತ್ತಾನೆ. ಕಸಾರಾ, ಕರ್ಜತ್ ವರೆಗೆ ಓಡಾಡುವ ಲೋಕಲ್ ಗಾಡಿಗಳು ಬಹು ಮಂದಿ ಕನ್ನಡಿಗರನ್ನು ಹೊತ್ತು ಸಾಗುವುದಿದ್ದರೂ ಮುಂಬಯಿಯಲ್ಲಿ ಕನ್ನಡ ಪತ್ರಿಕೆಗಳೆಷ್ಟಿವೆ, ಕನ್ನಡ ಸಂಘ ಸಂಸ್ಥೆಗಳು ಏನು ಮಾಡುತ್ತಿವೆ, ಎಂದು ಅರಿಯುವ ವ್ಯವಧಾನವಿಲ್ಲದ ಜನರಿವರು! ಒಮ್ಮೆ ತಮ್ಮ ಗೂಡು ಸೇರಿದರೆ ಸಾಕು ಎನ್ನುವ ಅವಸರ, ಧಾವತಿಯ ನಡುವೆ ಕನ್ನಡಕ್ಕೆಲ್ಲಿಯ ಸ್ಥಾನ? ಹಾಗೆಂದು ನಾವು ಈ ಜನರನ್ನು ದೂರಬಹುದೇ? ಅವರು ಇದ್ದಲ್ಲಿ, ಕನ್ನಡದ ಪ್ರೀತಿ ಬೆಳೆಸಿ ಉಪನಗರಕ್ಕೂ ಸುದ್ದಿ ಮುಟ್ಟಿಸಲು ನಾವು ಮಾಡುವ ಪ್ರಯತ್ನ ಸಾಕೇ? ಉಪನಗರಗಳಲ್ಲಿ ವರ್ತಮಾನ ಪತ್ರಿಕೆ ಮಾರುವ ಅಂಗಡಿಗಳು ಎಷ್ಟು ಪತ್ರಿಕೆಗಳನ್ನು ತೂಗು ಹಾಕುತ್ತವೆ; ಎಂದು ನೋಡಿದರೆ ಸಂತಸ ಪಡಬಹುದಾದ ಸಂಗತಿ ಅಲ್ಲಿ ಘಟಿಸುವುದೇ ಇಲ್ಲ. ಇದಕ್ಕೆ ಕಾರಣ ಕನ್ನಡ ಅರಿಯದ ಸ್ಥಳದಲ್ಲಿ ಇದ್ದಾರೆಂಬ ಅರ್ಥವಲ್ಲ. ಕನ್ನಡ ಪತ್ರಿಕೆ, ಪುಸ್ತಕಗಳು ಇಲ್ಲದಿರುವುದು ಒಂದಾದರೆ, ಕನ್ನಡದ ಬಗೆಗಿನ ಅಲಕ್ಷ್ಯವೂ ಕಾರಣ. ಕನ್ನಡ ಜನ, ನಗರ ಬಿಟ್ಟು ಬಲು ದೂರ ಸಾಗಿ ನೆಲೆ ನಿಂತಿದ್ದು ಕನ್ನಡವನ್ನು ಕೇಳಿದಾಗಲೆಲ್ಲ ಅವರ ಕಣ್ಣು ಮಿಂಚುವುದನ್ನು ಕಂಡಾಗ ಅವರ ಅಸಹಾಯಕತೆಗೆ ಕನಿಕರವೂ ಆಗುತ್ತದೆ.

ಆದ್ದರಿಂದ ಈ ನಗರದ ಜನರಲ್ಲಿ, ಹೆಚ್ಚಿನವರು ಕನ್ನಡಕ್ಕೆ ಅನ್ಯಾಯ ಮಾಡುತ್ತಿದ್ದಾರೆ; ಎಂದು ಹೇಳಲು ಧೈರ್ಯ ಸಾಲದೆನಿಸುತ್ತದೆ. ಆದರೂ ಕನ್ನಡತನ ಉಳಿಸಿಕೊಂಡು ತಮಗೆ ಸಾಧ್ಯವಿದ್ದಷ್ಟು ಈ ಭಾಷೆಯನ್ನು ತಮ್ಮ ಮಕ್ಕಳೂ ಅರಿತುಕೊಳ್ಳುವಂತೆ ಮಾಡುವ ಪರಿಸರ ನಿರ್ಮಾಣದ ಕೆಲಸವನ್ನು ಕನ್ನಡ ತಾಯಿ-ತಂದೆ ಮಾಡಬಹುದಲ್ಲವೇ, ಎಂಬ ಹಂಬಲ ಮನಸ್ಸಿನಾಳದಲ್ಲಿ ಹುಟ್ಟಿಕೊಳ್ಳುತ್ತದೆ. ನಮ್ಮ ಮಕ್ಕಳು ನಮಗೇ ಪರಕೀಯರಾಗುವ ಸಂದರ್ಭ ಮಾತ್ರ ಬಾರದಿರಲಿ!

ಇನ್ನು, ಕನ್ನಡಿಗರು ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮದ ತರಗತಿಗಳಿಗೆ ಕಳುಹಿಸಿಕೊಡಲು ಉತ್ಸಾಹ ತಾಳುವುದಿಲ್ಲವೇಕೆ, ಎಂಬ ಪ್ರಶ್ನೆಯನ್ನೇ ತೆಗೆದುಕೊಳ್ಳೋಣ. ನಗರ ಸಭೆಯ ಕನ್ನಡ ತರಗತಿಗಳಿಗೆ ಹಿಂದಿದ್ದ ಆಕರ್ಷಣೆ ಇಂದು ಉಳಿದಿಲ್ಲ. ಇದಕ್ಕೆ ಅಲ್ಲಿ ಕಲಿಸುವ ಶಿಕ್ಷಕರು ನಿರುಪಯೋಗಿಗಳೆಂದು ಹೇಳುವುದು ಮೂರ್ಖತನದ ಮಾತು. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವುದರಿಂದ ಮೂರು ತರಗತಿಗಳನ್ನು ಒಬ್ಬರೇ ಶಿಕ್ಷಕರು ನಿಭಾಯಿಸುವ ಶೋಚನೀಯ ಸ್ಥಿತಿಯನ್ನು ಕಂಡು ನಾವು ಮರುಗಬೇಕಾಗುತ್ತದೆ. ಎಲ್ಲಿ ಇಂಥ ಸಮಸ್ಯೆ ಇಲ್ಲವೋ ಅಲ್ಲಿನ ವಿದ್ಯಾರ್ಥಿಗಳು ಚುರುಕಾಗಿಯೇ ಇರುತ್ತಾರೆ. ಅವರು ಕನ್ನಡದ ಬಗೆಗೆ ಅಗಾಧ ಪ್ರೇಮ ಉಳ್ಳವರೂ ಆಗಿದ್ದಾರೆ. ಜನರ ಕೈಯಲ್ಲಿ, ಹಣ ಝಣಗುಟ್ಟುತ್ತಿರಬೇಕಾದರೆ ನಗರ ಸಭೆಯ ಶಾಲೆಗಳು ಯಾರಿಗೆ ಬೇಕು? ಹೊಸ ಶಾಲೆಗಳನ್ನು ತೆರೆಯಲು ನಗರ ಸಭೆಯು ಇದರಿಂದಲೇ ಅನುಮತಿ ಕೊಡುವುದಿಲ್ಲ. ಈ ಸ್ಥಿತಿಯಲ್ಲಿ, ನಗರ ಸಭೆಯನ್ನು ದೂರಿ ಪ್ರಯೋಜನವಿಲ್ಲ. ತಮ್ಮ ಅಸ್ತಿತ್ವದ ಕಾಳಜಿ ಉಳ್ಳ ಇತರ ಶಾಲೆಗಳಲ್ಲಿ, ಕನ್ನಡ, ಉಸಿರು ಹಿಡಿದು ತಕ್ಕಮಟ್ಟಿಗೆ ಬದುಕಿದೆ.


ಕನ್ನಡ ಮಾಧ್ಯಮದಲ್ಲಿ ಕಲಿತು ಕಾಲೇಜು ಸೇರುವ ವಿದ್ಯಾರ್ಥಿಗಳ ಸ್ಥಿತಿ ಇನ್ನೂ ಕರುಣಾಜನಕವಾದದ್ದು. ಇದು ನಾಗಾಲೋಟದ ಯುಗ. ಕಾಲೇಜುಗಳಲ್ಲಿ ಹೆಚ್ಚಿನ ವಿಷಯಗಳನ್ನು ಇಂಗ್ಲೀಷಿನಲ್ಲಿ ಕಲಿಸುವುದರಿಂದ ಪಠ್ಯಗಳು ಇಂಗ್ಲೀಷಿನಲ್ಲೆ ಇರುವುದರಿಂದ ಇತರ ವಿದ್ಯಾರ್ಥಿಗಳ ಜೊತೆಯಲ್ಲಿ ನೀಗಲಾರದೆ, ಅತ್ತ ಕೋಚಿಂಗ್ ಕ್ಲಾಸುಗಳಿಗೆ ಹಣ ತೆರಲಾರದೆ ನಮ್ಮ ಕನ್ನಡದ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ಹನ್ನೊಂದನೆ ತರಗತಿಯಲ್ಲೆ ಸೋಲು ಪಡೆದು ನಿರಾಶರಾಗುತ್ತಾರೆ. (ನಗರ ಸಭೆಗಳಿಂದ ಬರುವ ವಿದ್ಯಾರ್ಥಿಗಳ ಕಷ್ಟ ಹೇಳತೀರದು). ಮರಾಠಿ, ಹಿಂದಿ, ಗುಜರಾತಿ ಮಾಧ್ಯಮಗಳಿಂದ ಕಾಲೇಜಿಗೆ ಬರುವ ವಿದ್ಯಾರ್ಥಿಗಳು, ಅವರವರ ಭಾಷೆಯಲ್ಲಿ, ಉತ್ತರ ಪತ್ರಿಕೆಗಳನ್ನು

(ಪುಟ 8ಕ್ಕೆ)

# ಮುಂಬಯಿ ಮೈಸೂರು ಅಸೋಸಿಯೇಷನ್
# ಒಂದು ಸವಿ ನೆನಪು

ನಾನು 1932-33ರಲ್ಲಿ ನನ್ನ ವಿದ್ಯಾರ್ಥಿ ದೆಸೆಯಲ್ಲಿ ಮುಂಬಯಿ ಮೈಸೂರು ಅಸೋಸಿಯೇಷನ್ನಿನ ಸದಸ್ಯನಾಗಿದ್ದೆ. ಆಗ ನನಗೆ 22 ವಯಸ್ಸಿರಬಹುದು. ನನ್ನ ಮಗಳು ಶ್ರೀಮತಿ ವಾಣಿ ಮುಂಬಯಿಯಲ್ಲಿ ನೆಲಸಿ ಮೈಸೂರು ಅಸೋಸಿಯೇಷನ್ನಿನ ಸದಸ್ಯಳಾಗಿದ್ದಾಳೆ. ಅವಳು ನನ್ನನ್ನು "ನಿಮ್ಮ ಕಾಲದಲ್ಲಿ ಸಂಘವು ಹೇಗಿತ್ತು?" ಎಂದು ಪ್ರಶ್ನಿಸಿದಾಗ ಈ ಹಿಂದಿನ ಸವಿ ನೆನಪು ನನಗೆ ಉಂಟಾಯಿತು.

ಆಗ ಮುಂಬಯಿ ಮೈಸೂರು ಅಸೋಸಿಯೇಷನ್ ಮಾಟುಂಗ ರೈಲ್ವೆ ಸ್ಟೇಷನ್ನಿನ ಹತ್ತಿರದ ಒಂದು ಬಾಡಿಗೆ ಮನೆಯಲ್ಲಿ ನಡೆಯುತ್ತಿತ್ತು. ದಿವಾನ್ ಬಹದ್ದೂರ್ ರಾಮಸ್ವಾಮಿಗಳು ಸಂಘದ ಅಧ್ಯಕ್ಷರಾಗಿದ್ದರು. ಸಂಘದ ಸದಸ್ಯರ ಸಂಖ್ಯೆ ಸುಮಾರು 40-50 ಇತ್ತು, ಅಷ್ಟೇ. ಸಂಘವು ಇನ್ನು ಶೈಶವದಲ್ಲಿತ್ತು, ಮೈಸೂರಿನವರು ಒಟ್ಟಿಗೆ ಸೇರತಕ್ಕ ಅಭ್ಯಾಸವೂ ಇರಲಿಲ್ಲ. ನಾವು ಕೆಲವೇ ಜನ ವಿದ್ಯಾರ್ಥಿಗಳು ಮತ್ತು ಯುವಕರು ಒಂದೆಡೆಯಲ್ಲಿ ಸೇರುವುದಕ್ಕಾಗಿ ಸಾಯಂಕಾಲದ ಸಮಯದಲ್ಲಿ ನಮ್ಮ ಸಂಘದ ಕಟ್ಟಡ ಪಕ್ಕದಲ್ಲಿದ್ದ ಖಾಲಿ ನಿವೇಶನದಲ್ಲಿ ವಾಲಿಬಾಲ್ ಆಟವನ್ನು ಶುರು ಮಾಡಿದೆವು. ಹಾಗೂ ನಮ್ಮ ಅಧ್ಯಕ್ಷರಾದ ರಾವ್ ಬಹದ್ದೂರ್ ರಾಮಸ್ವಾಮಿಯವರು ವರ್ಷಕ್ಕೊಮ್ಮೆಯಾದರೂ ಒಂದು ಸಾಮೂಹಿಕ ಊಟವನ್ನು ಏರ್ಪಡಿಸುತ್ತಿದ್ದರು. ಹೀಗೆ ಒಂದು ಸಲ ಸುಮಾರು 100-150 ಜನ ಮೈಸೂರಿನವರನ್ನು ಎಲಿಫೆಂಟಾ ಕೇವ್ಸ್‌ಗೆ (ಗುಹೆಗೆ) ಅವರ ಖರ್ಚಿನಲ್ಲಿಯೇ ಕರೆದುಕೊಂಡು ಹೋಗಿದ್ದರು. ನನ್ನ ಸಮಕಾಲೀನರು ಮತ್ತು ಮೈಸೂರಿನಲ್ಲಿ ಕಾಲೇಜಿನಲ್ಲಿ ಓದುತ್ತಿದ್ದಾಗ ಜೊತೆಗಾರರು ಆಗಿದ್ದ ಶ್ರೀಮಾನ್ ಕೇಶವ್ ಮೂರ್ತಿಯವರು ಮುಂಬಯಿಯಲ್ಲಿಯೇ ನೆಲಸಿದ್ದರು. ಅವರು ಸಾಯಂಕಾಲದ ಆಟಗಳಲ್ಲಿ ನಮ್ಮ ಜೊತೆಯಲ್ಲಿಯೇ ಇರುತ್ತಿದ್ದರು ಹಾಗೂ ನಾವಿಬ್ಬರೂ ಒಂದು ಸಲ ಮೆಸ್ಸಿನ ಜಾಯಿಂಟ್ ಸೆಕ್ರೆಟರಿಗಳಾಗಿದ್ದೆವು. ನಾವು ಒಬ್ಬರಿಗೊಬ್ಬರ ನೆರವಿನಲ್ಲಿ ಮೆಸ್ಸಿನ ಆಡಳಿತವನ್ನು ವಹಿಸಿಕೊಂಡು, ನಮ್ಮಗಳ ಸ್ವಪ್ರಯತ್ನದಿಂದ ಖರ್ಚು ವೆಚ್ಚಗಳನ್ನು ಹತೋಟಿಗೆ ತಂದು ಅಡುಗೆಯ ಗುಣಮಟ್ಟವನ್ನು ಹೆಚ್ಚಿಸಿ ಊಟದ ಬೆಲೆಯನ್ನು ಕಡಿಮೆ ಮಾಡಿ, ಅಲ್ಲಿ ಕೆಲಸ ಮಾಡುತ್ತಿದ್ದವರಿಗೆ ಕೈ ತುಂಬಾ ಸಂಬಳ ಕೊಡುತ್ತಿದ್ದೆವು. ನಾವೇ ಸ್ವತಃ Byculla ಮಾರುಕಟ್ಟೆಗೆ ಹೋಗಿ ತರಕಾರಿ ಹಾಗೂ ಅಡುಗೆಯ ಸಾಮಾನುಗಳನ್ನು ತರುತ್ತಿದ್ದುದರಿಂದ ವೆಚ್ಚ ಕಡಿಮೆಯಾಗುತ್ತಿತ್ತು.



ಆಗ ಗುಬ್ಬಿ ಕಂಪೆನಿಯ ನಾಗೇಂದ್ರರಾಯರು ಮತ್ತು ಚಲನ ಚಿತ್ರ ನಟ ಹನುಮಂತರಾವ್ ಮ. ರಾ. ಕೇಶವ್ ಮತ್ತು ಮೊಗಲ್ ಮುಂತಾದವರು ನಮ್ಮ ಸಂಘದ ಸದಸ್ಯರಾಗಿದ್ದರು. ಆಗಿನ ಸಂಘದ ಸೆಕ್ರೆಟರಿಯವರು - ಹೆಸರು ಮರೆತಿದ್ದೇನೆ - ಮತ್ತು ಇತರ ಯುವಕರು, ಹೇಗಾದರೂ ಸಂಘಕ್ಕೆ ನಮ್ಮದೇ ಆದ ಕಟ್ಟಡವನ್ನು ಹೊಂದಲು ಪ್ರಯತ್ನ ಮಾಡಬೇಕೆಂದು ತೀರ್ಮಾನಿಸಿದೆವು. ಹಣ ಕೂಡಿಸುವುದಕ್ಕೆ ಶ್ರೀಮಾನ್ ನಾಗೇಂದ್ರ ರಾವ್ ಮತ್ತು ಹನುಮಂತ ರಾವ್‌ರವರ ನಿರ್ದೇಶನದಲ್ಲಿ `ವಿರಾಟ ಪರ್ವ' ನಾಟಕವನ್ನು ರಂಗ ಮಂಚಕ್ಕೆ ತಂದೆವು. ಆ ನಾಟಕದಲ್ಲಿ ನನ್ನ ಪಾತ್ರವು ಬಹಳ ಪುಟ್ಟದಾಗಿತ್ತು, ಅದು ಉತ್ತರೆಯ ಪಾತ್ರ, ಆದರೆ ನನಗೆ ಅದು ಮೈಸೂರು ಜನಗಳ ಪರಿಚಯ ಮತ್ತು ಅಭಿಮಾನವನ್ನು ಉಂಟು ಮಾಡಿತ್ತು. ಇನ್ನೊಮ್ಮೆ ಕಟ್ಟಡದ ನಿಧಿಯನ್ನು ಹೆಚ್ಚಿಸಲು ಒಂದು ಕಲಾ ಕೂಟವನ್ನು ಜಹಾಂಗೀರ್ ಭವನದಲ್ಲಿ ಏರ್ಪಡಿಸಿ ಅದರಂಗವಾಗಿ ಶ್ರೀಮಾನ್ ಮೂರ್ತಿರಾಯರ `ಆಷಾಢಭೂತಿ' ನಾಟಕವನ್ನು ಪ್ರದರ್ಶಿಸಿದೆವು. ಅದರಲ್ಲಿ ನಾನು `ಸರಸು' ಪಾತ್ರ ಮಾಡಿದ್ದೆ. ಅದು ನನಗೆ ಪೂರ್ಣ ಜಯವನ್ನು ಕೊಡಿಸಿತು. ದಿವಾನ್ ಬಹದ್ದೂರ್ ರಾಮಸ್ವಾಮಿಯವರು ನನ್ನ ಅಭಿನಯವನ್ನು ಮೆಚ್ಚಿ ಒಂದು ಚಿನ್ನದ ಪದಕ ಮತ್ತು ಶ್ರೀಮತಿ ಚಿನ್ನಸ್ವಾಮಿಯವರಿಂದ ಒಂದು ಬೆಳ್ಳಿಯ ಪದಕವನ್ನು ಕೊಟ್ಟಿದ್ದರು. ಈ ಕೂಟದ ವಿರಾಮದಿಂದ ಕಟ್ಟಡದ ನಿರ್ಮಾಣಕ್ಕೆ ಸಾಕಷ್ಟು ಹಣ ಸೇರಿಸಿದೆವು. ಈ ನಮ್ಮ ಪ್ರದರ್ಶನದಿಂದ ಶುರುವಾದ ಸ್ವಗೃಹ ನಿರ್ಮಾಣ ಬ್ಯುರೋದವರಾಗಿ ಬೆಳೆದು ಅಭಿವೃದ್ಧಿ ಹೊಂದಿರುತ್ತದೆ. ಇದಕ್ಕೆ ನಮ್ಮ ನಂತರ ಸಂಘದ ಅಧ್ಯಕ್ಷರಾಗಿ ಹಲವು ವರ್ಷಗಳು ಕೆಲಸ ನಿರ್ವಹಿಸಿದ ನನ್ನ ಅಣ್ಣ ದಿವಂಗತ ಶ್ರೀ ಬಿ. ನಾರಾಯಣ ಸ್ವಾಮಿಗಳು ಸ್ವತಃ, ಪರಹಸ್ತಗಳಿಂದ ಸಮೃದ್ಧಿಯಾಗಿ ಹಣವನ್ನು ಗಳಿಸಿಕೊಟ್ಟಿದ್ದಾರೆ. ಇಂದಿನ ಭವ್ಯ ಮಂದಿರವನ್ನು ಹೊಂದಿರುವ ಮುಂಬೈನ ಮೈಸೂರು ಅಸೋಸಿಯೇಷನ್ನಿನ ಸದಸ್ಯರಿಗೆ ಅನೇಕ ವಂದನೆಗಳು.

- ಬಿ. ಗೋಪಾಲಯ್ಯ.

## ಅಭಿನಂದನೆ

ಅಸೋಸಿಯೇಷನ್ನಿನ ಆಜೀವ ಸದಸ್ಯರಾದ ಶ್ರೀ ಜಿ. ವಿ. ಕುಲಕರ್ಣಿಯವರಿಗೆ ಮುಂಬೈ ವಿಶ್ವವಿದ್ಯಾಲಯಕ್ಕೆ ಡಾ। ಕಂದಸ್ವಾಮಿಯವರ ಮಾರ್ಗದರ್ಶನದಲ್ಲಿ ಸಲ್ಲಿಸಿದ "Influence of Arabindo on Gokak" ಎಂಬ ಪ್ರಬಂಧಕ್ಕೆ ಪಿ.ಎಚ್.ಡಿ. ಪದವಿ ದೊರಕಿದೆ. "ನೇಸರು" ಜಿ. ವಿ. ಕುಲಕರ್ಣಿಯವರಿಗೆ ಅಭಿನಂದನೆ ಸಲ್ಲಿಸುತ್ತದೆ.

FOR ALL YOUR DOMESTIC AND INTERNATIONAL TRAVEL ARRANGEMENTS
CONTACT
AUGUST TRAVEL SERVICE
Agents For
INDIAN AIR LINES,
EAST WEST,
MODI LUFT &
JET AIRLINES
REGD. OFFICE:
3/15 ASHIANA, SECTOR 17,
VASHI, NEW BOMBAY.
PHONE: 768 25 91 * 768 25 58
767 09 02
GRAMS: AUGTRASERV
ALSO AT:
2/16, KABBUR HOUSE,
SION (E), BOMBAY-400 022.
PHONE: 407 29 84 * 409 35 73
* 407 77 50

ಸಂದರ್ಶನ

# ಶಿಕ್ಷಣ ತಜ್ಞೆ ಡಾ| ಉಷಾ ಎಸ್. ರಾವ್ ಅವರೊಂದಿಗೆ ಸಂದರ್ಶನ

● ರೇಖಾ

**ಡಾ| ಉಷಾ ಅವರದು ಬಹುಮುಖ ಪ್ರತಿಭೆ. ಶಿಕ್ಷಣ ರಂಗಕ್ಕೆ ಸೇವೆ ಸಲ್ಲಿಸುವುದರೊಂದಿಗೆ ಸಾಹಿತ್ಯ ಕೃತಿಯನ್ನು ಮಾಡಿದ್ದಾರೆ. ಹಿಪ್ನೋ ಥೆರಪಿಸ್ಟ್ ಆಗಿ ಚಿಕಿತ್ಸೆ ನೀಡಿದ್ದಾರೆ. ಮಹತ್ವಾಕಾಂಕ್ಷೆಯುಳ್ಳ ಈಕೆಯ ಸಾಧನೆ ಅಪಾರ. ಮತ್ತಷ್ಟು ಎತ್ತರಕ್ಕೆ ಏರಬಲ್ಲ ಅದಮ್ಯ ಉತ್ಸಾಹಕ್ಕೆ ಕುಂದಿರದ ವ್ಯಕ್ತಿತ್ವ ಈಕೆಯದು.**



ಡಾ| ಉಷಾ ಎಸ್. ರಾವ್ ನೇಸರು ಪತ್ರಿಕೆಯ ಓದುಗರಿಗೆ "ವಶೀಕರಣ ಮತ್ತು ರೋಗ ಚಿಕಿತ್ಸೆ"ಯ ಲೇಖಕಿಯಾಗಿ ಪರಿಚಿತರಾಗಿದ್ದಾರೆ. ಪರೇಲ್‌ನಲ್ಲಿರುವ ಗೋಖಲೆ ಎಜ್ಯುಕೇಷನ್ ಸೊಸೈಟೀಸ್ ಕಾಲೇಜ್ ಆಫ್ ಎಜ್ಯುಕೇಷನ್ ಅಂಡ್ ರಿಸರ್ಚ್‌ನ ಪ್ರಾಂಶುಪಾಲಕಿ ಡಾ| ಉಷಾ ಮನಶ್ಶಾಸ್ತ್ರ ಪದವೀಧರೆಯಾಗಿದ್ದು "ಬೇಸಿಕ್ ಅಂಡ್ ಅಡ್ವಾನ್ಸ್ ಕೋರ್ಸ್ ಇನ್ ಹಿಪ್ನೋಸಿಸ್ ಅಂಡ್ ಹಿಪ್ನೋ ಥೆರಪಿ"ಯಲ್ಲಿ ವಿಶೇಷ ಅಧ್ಯಯನ ಮಾಡಿದ್ದಾರೆ. ಬಹುಮುಖ ಪ್ರತಿಭೆಯ ಈಕೆಯ ಪರಿಚಯ 'ನೇಸರು' ಓದುಗರಿಗೆ ಮಾಡಿಕೊಡುವ ಉದ್ದೇಶದಿಂದ ಅವರನ್ನು ಸಂಪರ್ಕಿಸಿದಾಗ ಸಂದರ್ಶನಕ್ಕೆ ಒಪ್ಪಿಗೆ ಸೂಚಿಸಿದರು. ಅವರ ಮನೆಯಲ್ಲಿ ನಮ್ಮೊಂದಿಗೆ ನಡೆದ ಸಂಭಾಷಣೆಯ ಕೆಲವು ಭಾಗಗಳು ಆಕೆಯ ವಿವಿಧ ರಂಗಗಳಲ್ಲಿನ ಸಾಧನೆಗಳತ್ತ ಬೆಳಕು ಚೆಲ್ಲುತ್ತದೆ.

**ನಿಮ್ಮ ಬಾಲ್ಯ ಮತ್ತು ವಿದ್ಯಾಭ್ಯಾಸದ ಬಗ್ಗೆ ತಿಳಿಸಿ ಕೊಡ್ತೀರಾ?**

ಹುಟ್ಟಿ ಬೆಳೆದದ್ದು ಮುಂಬೈನಲ್ಲಿ. ತಂದೆ ಶ್ರೀನಿವಾಸ ಮೂರ್ತಿ, ತಾಯಿ ಲಕ್ಷ್ಮೀ ಮೂರ್ತಿ. ತಂದೆಗೆ ವರ್ಗ ಆಗ್ತಿದ್ದರಿಂದ 5 ವರ್ಷಕ್ಕೆ ಪೂನಾ ಬೋರ್ಡಿಂಗ್ ಸ್ಕೂಲ್‌ಗೆ ಸೇರಿಸಿದ್ರು. 11 ವರ್ಷ ಆಗೋ ತನಕ ಅಲ್ಲಿದ್ದೆ. ನಂತರ ಮುಂಬೈನಲ್ಲಿ ಓದಿದೆ. ಸೆಕೆಂಡರಿ ಶಾಲೆಯಲ್ಲಿ ಕೆಲಸ ಮಾಡ್ತಾ ತತ್ವಶಾಸ್ತ್ರ ಮತ್ತು ಮನಶ್ಶಾಸ್ತ್ರದಲ್ಲಿ ಉನ್ನತ ಪದವಿ ಪಡೆದೆ. 1969ರಲ್ಲಿ M.Ed. ಮುಗಿಸಿ 1972ರಲ್ಲಿ "Audio Visual Materials" ಎಂಬ ವಿಷಯದಲ್ಲಿ Ph.D. ಮಾಡಿದೆ.

**ನಿಮ್ಮ ವೃತ್ತಿಯ ಬಗ್ಗೆ?**

ಓದುವಾಗಲೇ ಸೆಕೆಂಡರಿ ಶಾಲೆಯಲ್ಲಿ ನೌಕರಿ ಮಾಡ್ತಿದ್ದನ್ನು ಹಿಂದೆಯೇ ಹೇಳಿದ್ದೇನೆ. ಗೋಖಲೆ ಎಜ್ಯುಕೇಷನ್ ಸೊಸೈಟೀಸ್ ಕಾಲೇಜ್ ಆಫ್ ಎಜ್ಯುಕೇಷನ್ ಅಂಡ್ ರಿಸರ್ಚ್‌ನಲ್ಲಿ 25 ವರ್ಷಗಳು ಕೆಲಸ ಮಾಡಿದ್ದೇನೆ. 6 ವರ್ಷಗಳ ಕಾಲ ಪ್ರಾಂಶುಪಾಲೆಯಾಗಿದ್ದು ಕಳೆದ ವರ್ಷ ನಿವೃತ್ತಿಯಾದೆ. ಸದ್ಯದಲ್ಲಿ ವೇತನ ತೆಗೆದುಕೊಳ್ಳದೇ ಅದೇ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನ್ನ ಮಾರ್ಗ ದರ್ಶನದಲ್ಲಿ ನಾಲ್ಕು ವಿದ್ಯಾರ್ಥಿಗಳು ಸಂಶೋಧನೆ ಮಾಡುತ್ತಿದ್ದಾರೆ.

**ಶಿಕ್ಷಣ ಹಾಗೂ ಮನಶಾಸ್ತ್ರದ ಬಗ್ಗೆ ನೀವು ಬರೆದಿರೋ ಪುಸ್ತಕಗಳ ಬಗ್ಗೆ ತಿಳಿಸಿಕೊಡಿ.**

Educational Technology
Conducting Educational Research
Exceptional Children
General Psychology
Industrial Psychology
Advanced Educational Study.

ಇಷ್ಟು ಪುಸ್ತಕಗಳನ್ನು ಬರೆದಿದ್ದೇನೆ. ಕೆಲವು ಪಠ್ಯ ಪುಸ್ತಕಗಳಾಗಿ ಆಯ್ಕೆ ಆಗಿದ್ರೆ ಕೆಲವು referenceಗೆ ಉಪಯುಕ್ತವಾಗಿದೆ.

**ಬಹಳಷ್ಟು ಬಾರಿ ವಿದೇಶಗಳಿಗೆ ಉಪನ್ಯಾಸ ಕೊಡಲು ಹೋಗಿದ್ದೀರಿ. ಅದರ ಬಗ್ಗೆ ವಿಸ್ತಾರವಾಗಿ ತಿಳಿಸಿ ಕೊಡ್ತೀರಾ?**

1991ರಲ್ಲಿ Cambridge Universityಯಲ್ಲಿ "Teaching and learning through drama" ಎಂಬ course ಮಾಡಿದೆ. ಅಲ್ಲಿಂದ ಕಲಿತು ಬಂದದ್ದನ್ನು ಇಲ್ಲಿಯ ಶಾಲೆಗಳಲ್ಲಿ ಪ್ರಯೋಗಿಸಿ Connecticutನ World Education Fellowshipನ conferenceನಲ್ಲಿ "Teaching and learning through drama" - an experiemental approach ಎಂಬ ಬಗ್ಗೆ ಪ್ರಬಂಧ ಮಂಡಿಸಿದೆ.

1992ರಲ್ಲಿ Thailandನಲ್ಲಿ International Council of Distance Educationನಲ್ಲಿ Studies Support System ಬಗ್ಗೆ ಮಾತನಾಡಿದೆ.

1994ರಲ್ಲಿ Swedenನ LINKOPING Universityಯ Women's Study Centreನಲ್ಲಿ Gurukala System in India; Women and Education in India; Women their Status in India; ಎಂಬ ವಿಷಯಗಳ ಬಗ್ಗೆ ಉಪನ್ಯಾಸ ಮಾಲಿಕೆ ಕೊಟ್ಟೆ.

Japanನ World Education Fellowshipನಲ್ಲಿ Moral Education for the World Familyಯ ಬಗ್ಗೆ ಲೇಖನ ಪ್ರಸ್ತುತ ಪಡಿಸಿದೆ.

ಇದಲ್ಲದೆ America, Taiwan, Hong Kongಗಳಿಗೂ ಉಪನ್ಯಾಸ ನೀಡಲು ಹೋಗಿದ್ದೇನೆ.

**ಶೈಕ್ಷಣಿಕ ಪದ್ಧತಿ ಯಾವ ದೇಶದಲ್ಲಿ ಚೆನ್ನಾಗಿದೆಯೆಂತ ನಿಮಗೆ ಅನ್ನಿಸುತ್ತದೆ?**

America ಮತ್ತು U.K.ನಲ್ಲಿ ಚೆನ್ನಾಗಿದೆಯೆಂತ ಅನ್ಸುತ್ತೆ. ಅಲ್ಲಿ I.Q. ಜಾಸ್ತಿಯಿರೋ ಮಕ್ಕಳಿಗೆ Mentally retarded ಮಕ್ಕಳಿಗೆ, handicapped ಮಕ್ಕಳಿಗೆ Special Schoolಗಳಿವೆ. ಇಲ್ಲಿ Special Schoolಗಳು ಕೆಲವೆಡೆ ಇದ್ರೂ ನಾವು ಬಹಳಷ್ಟು ಸಾಧಿಸಬೇಕಾಗಿದೆ.

**ಸಾಹಿತ್ಯದ ಕ್ಷೇತ್ರಕ್ಕೆ ನಿಮ್ಮ ಕೊಡುಗೆ?**

ಸಣ್ಣ ಕತೆ, ಕವಿತೆ, ವೈಚಾರಿಕ ಲೇಖನ ಬರೆಯುತ್ತೇನೆ. ಕತೆ ಮರಾಠಿಯಲ್ಲಿ, ಕವಿತೆಗಳು ಇಂಗ್ಲೀಷ್ ಹಾಗೂ ಮರಾಠಿಯಲ್ಲಿ ಬರೆದಿದ್ದೇನೆ. "ಮಾಝಾ ಕವಿತಾ" ಎಂಬ ಕವನ ಸಂಕಲನ 1990ರಲ್ಲಿ ಪ್ರಕಟಗೊಂಡಿದೆ. ಮರಾಠಿಯ ಶಶಿ, ಪಹಿನಿ, ಮಾಹೇರ್, ಅಲಕ, ಮಾನಿನಿ ಇತ್ಯಾದಿ ನಿಯತಕಾಲಿಕಗಳಲ್ಲಿ ನನ್ನ ಕತೆ, ಕವಿತೆಗಳು ಪ್ರಕಟ ಆಗ್ತಾನೇ ಇರತ್ತೆ.

**Hypnosis ಬಗ್ಗೆ ನಿಮಗೆ ಆಸಕ್ತಿ ಮೂಡಿದ್ದು ಹೇಗೆ?**

Paperನಲ್ಲಿ ಬಂದಿದ್ದ advertisement ನೋಡಿ 1991ರಲ್ಲಿ Indian Association of Clinical Hypnosis and Researchನಲ್ಲಿ course ಮಾಡಿದೆ. ನಂತರ ಹೆಚ್ಚಿನ ಆಸಕ್ತಿ ಮೂಡಿ ಅಲ್ಲಿಯೇ Internship ಮಾಡಿ ಚಿಕಿತ್ಸೆ ಕೊಡುತ್ತಿದ್ದೆ. ಈಗ ಮನೇಲೇ ಕೊಡ್ತೀನಿ. Hypnosis ಬಗ್ಗೆ ಲೇಖನಗಳನ್ನು ಬರೆದಿದ್ದೇನೆ.

**ನಿಮಗೆ ಸಿಕ್ಕಿರುವ ಪುರಸ್ಕಾರಗಳು ಯಾವುವು?**

B.Ed. ಮಾಡುವಾಗ Rotary Award, Best Teacher Award Gokhale Education Society, Giants International Award for Outstanding Contribution to the Field of Education. "Reducing the stress and strain of adolescence through hypno-therapeutic technique" - an experimental approach ಎಂಬ innovative paperಗೆ ರಾಷ್ಟ್ರೀಯ ಪುರಸ್ಕಾರ ಸಿಕ್ಕಿದೆ.

(ಪುಟ 8ಕ್ಕೆ)

# "ರಾಮಾಯಣ ದರ್ಶನ"ದಲ್ಲಿ ಮಹೋಪಮೆ

● ಡಾ| ತಾಳ್ತಜೆ ವಸಂತ ಕುಮಾರ

ರಾಮಾಯಣ ನಮ್ಮ ರಾಷ್ಟ್ರದ ಜೀವನವನ್ನು ಸಾವಿರಾರು ವರ್ಷಗಳು ಕಾಲ ಹಸುರುಗೊಳಿಸಿಕೊಂಡಿರುವ ಮಹಾಕಾವ್ಯ. ಒಂದು ಜನಾಂಗದ ಜೀವನದಲ್ಲಿ ಇಷ್ಟು ದೀರ್ಘಕಾಲ ಈ ರೀತಿ ಪ್ರಭಾವಶಾಲಿಯಾಗಿ ಬೆರೆತು ಹಸುರಾಗಿರುವ ಕಾವ್ಯ ಮತ್ತೊಂದಿಲ್ಲ. "ಶ್ರೀ ರಾಮಾಯಣ ದರ್ಶನಂ" ಇದೇ ಶತಮಾನಕ್ಕೆ ಸಲ್ಲುವ ಕನ್ನಡದಲ್ಲಿ ಅಮರವಾಗಿ ನಿಲ್ಲಬಲ್ಲ ಮೇರುಕೃತಿ. ಕುವೆಂಪು ರಾಮಾಯಣವನ್ನು ಕಲಾತ್ಮಕವಾಗಿ ಪರಿವರ್ತಿಸಿ ಮಾನವೀಯ ಭಾವನೆಗಳ ಮಿಡಿತದಿಂದ ಜೀವಂತಗೊಳಿಸಿದ್ದಾರೆ. ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ, "ರಾಮಾಯಣ ದರ್ಶನಂ" ದಲ್ಲಿನ ಮಹೋಪಮೆಯ ಬಗ್ಗೆ ಈ ಲೇಖನದಲ್ಲಿ ತಿಳಿಸಿದ್ದಾರೆ.

ಭಾರತೀಯ ಸಾಹಿತ್ಯದಲ್ಲಿ ರಾಮಾಯಣ-ಮಹಾಭಾರತಗಳಿಗೆ ಅತ್ಯಂತ ವಿಶಿಷ್ಟವಾದ ಸ್ಥಾನವಿದೆ. ಸಾಹಿತ್ಯ ವಸ್ತುವಿನ ದೃಷ್ಟಿಯಿಂದ ಇವುಗಳು ಮೊಗೆದಷ್ಟೂ ಮುಗಿಯದ ತವನಿಧಿಗಳಾಗಿವೆ. ಕೆಲವು ಆಧುನಿಕ ಕೃತಿಗಳು ಈ ಮಹಾಕಾವ್ಯಗಳನ್ನು ಬೇರೆಯೇ ನೆಲೆಯಲ್ಲಿ ಗ್ರಹಿಸಿ, ಅವುಗಳ ಸಿದ್ಧವಾದ ಪ್ರತಿಮೆಗಳನ್ನು ಒಡೆದು ಮರಳಿ ಕಟ್ಟುವ ಕಾರ್ಯವನ್ನು ಮಾಡಿವೆ. ಆದಿಕವಿ ಪಂಪನಿಂದ ಮೊದಲಾದ ಈ ಪ್ರಕ್ರಿಯೆಯು ಈ ಶತಮಾನದ ಕುವೆಂಪು, ಗಿರೀಶ್ ಕಾರ್ನಾಡ್, ಭೈರಪ್ಪ ಮುಂತಾದವರ ವರೆಗೆ ಅಬಾಧಿತವಾಗಿ ನಡೆಯುತ್ತಲೇ ಬಂದುದನ್ನು ಕಾಣುತ್ತೇವೆ.

ಕುವೆಂಪು ಅವರ `ರಾಮಾಯಣ ದರ್ಶನಂ' ಅಂತೂ ``ಮಹಾಕಾವ್ಯದ ಕಾಲ ಮುಗಿದು ಹೋಯಿತು ಎನ್ನುವವರಿಗೆ ಒಂದು ಸವಾಲಾಗಿ, ಮಹತ್ತಾದುದಕ್ಕೆ ಕಾಲದ ಕಟ್ಟಿಲ್ಲ"ವೆನ್ನುವುದಕ್ಕೆ ಸಾಕ್ಷಿಯಾಗಿ ನಿಂತಿರುವ ಕೃತಿ ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಗೌರವಕ್ಕೂ ಇದು ಪಾತ್ರವಾಗಿದೆ.

ಈ ಕೃತಿಯು ಮಹಾ ಛಂದಸ್ಸಿನಲ್ಲಿ ರಚಿತವಾಗಿದೆ. ರಾಮಾಯಣದ ದಿವ್ಯ ಚೇತನಗಳನ್ನು ``ವಾಗರ್ಥ ರಥವೇರಿ, ಭಾವದಗ್ನಿಯ ಪಥಂಬಿಡಿದು" ಬರಲು ಆಹ್ವಾನಿಸುವ ಈ ಕೃತಿಯ ಮೂಲ ಲಕ್ಷ್ಯವೇ ``ರಾವಣಾವಿದ್ಯೆ"ಯಾದ ನಮ್ಮ ಮರ್ತ್ಯ ಪ್ರಜ್ಞೆಯನ್ನು ತನ್ನ ತಮದಿಂದ ಮುಕ್ತಗೊಳಿಸುವುದಾಗಿದೆ.

ಇದು ತನ್ನ ವಸ್ತುವನ್ನು ನೇರವಾಗಿ ರಾಮಾಯಣದಿಂದಲೇ ಸ್ವೀಕರಿಸದಿದ್ದರೂ, ಪಾತ್ರವಿನ್ಯಾಸ, ಘಟನಾ ಪರಂಪರೆ, ಸನ್ನಿವೇಶ ಚಿತ್ರಣಗಳಲ್ಲಿ ದರ್ಶನವನ್ನು ಕವಿ ರಚಿಸಲಿಲ್ಲ. ಬದಲಿಗೆ ಆ ಕೃತಿಯೇ `ಶ್ರೀ ಕುವೆಂಪು'ವನ್ನು ಸೃಜಿಸಿತು. ಈ ಕೃತಿಗೆ ಸ್ವಂತಿಕೆಯನ್ನು ತಂದುಕೊಟ್ಟ ಅಂಶಗಳಲ್ಲಿ ಅದರ ಮಹೋಪಮೆ (Epic Simile)ಗಳು ಮಹತ್ವದ ಸ್ಥಾನವನ್ನು ಪಡೆಯುತ್ತವೆ.

ಉದಾಹರಣೆಗೆ ರಾಮಾಯಣ ದರ್ಶನದಲ್ಲಿ ಬರುವ ಪಂಪಾ ಸರೋವರದ ವರ್ಣನೆಯನ್ನು ನೋಡಬಹುದು.

ಒಯ್ಯೊಯ್ಯನೆ ದಿವಾಕರಂ
ತ್ರೈಲೋಕ್ಯ ಸೌಂದರ್ಯ ಸೌವರ್ಣ ಕಲಶಮನೆ
ಮೈದೋರಿ, ಮೇಲೇರಿ, ಕನಕಜಲ ಕಾಂತಿಯಂ
ಸಿಂಚನಂಗೈಯ್ಯು ಕಾಂಚಮಿಸಿದನು ಕಾನನ
ಶ್ಯಾಮಾಂಬರಂ ಪೀತಮಪ್ಪಂತ ವನಪಕ್ಷಿ
ಜಲಪಕ್ಷಿಕಂಠಕೃತ ತುಮುಲ ನಾನಾ ಸ್ವನಂ
ಬುಗ್ಗೆಯೋಲುಣ್ಣೆ ಪರಿದುದೋ ಸರೋವರಕೆನಲ್,
ನೀರು ತಾಂ ನೀರುಗಳಾಯ್ತು, ಬೇರೆ ಬೇರೆಯ
ರಂಗು
ರಂಗಿಂದೆ; ಕೆರ್ ನೀಲಿ ಬೆಳ್ ನೀಲಿಯಾಯ್ತಿಲ್ಲಿ;
ಬೆಳ್‌ನೀಲಿ ಹೂ ಹಳದಿಯಾಯ್ತಲ್ಲಿ. ಹೂ ಹಳದಿ
ಹೊನ್ನಾದುದಿಲ್ಲಿ, ಹೊನ್ನಸುಗೆ ಕೆಂಪಾದುದದೊ
ಅಲ್ಲಿ, ಪಚ್ಚನೆಯ ರಾಗಮೊಯ್ಯನೆಯೆ ಕಿಚ್ಚಾಯ್ತು
ಕಿಚ್ಚು ತಿರುಗಿದುದು ಪುಷ್ಯರಾಗಕ್ಕೆ
ಮರಳಿ ಅದೊ ಇಲ್ಲಿ ಗೋಮೇದಿಕಂ; ನೋಡಲ್ಲಿ
ವೈಡೂರ್ಯಮತ್ತಲದೊ ವಿದ್ರುಮಂ !
ರವಿಶಿಲ್ಪಿ ತಾಂ
ಸಪ್ತರಾಗದ ಕಿರಣಟಂಕ ಕವಿಕರ್ಮದಿಂ
ಕೆತ್ತಿ ಕಲ್ಪಿಸಿದನೊ ಅನೇಕ ರತ್ನಂಗಳಂ
ಪಂಪಾ ಸರೋವರದ ಬೃಹದೇಕ ನೀಲದಿಂ
ಪೇಳೆಂಬಿನಂ, ವಿವಿಧರಾಗ ರುಚಿರಂ ಹೃದಂ
ರಾರಾಜಿಸಿತು ರಾಮ ಹೃದಯಕೆ ವಿರಹದುರಿಯಂ
ಕೆರಳ್ಚೆ ಕಾಮನ ಬಿಲ್ಲಿನೋಕುಳಿಯವೋಲ್ !
(ರಾ. ದ. 299-300).

ಉಪಮೆಯು ರೂಪಕವಾಗಿ ಪರಿವರ್ತಿತವಾಗುವ ಕ್ರಿಯೆಯನ್ನು ಇಲ್ಲಿ ಗುರುತಿಸುತ್ತೇವೆ. ಅಂದರೆ, ಇಲ್ಲಿ ಸೀತೆಯ ವಿರಹದಿಂದ ಬಳಲುವ ರಾಮನ ಚಿತ್ರಣವು ಕವಿಯ ಪ್ರಧಾನ ಲಕ್ಷ್ಯವಾಗಿದೆ.

ಅವನ ತಪ್ತ ದೃಷ್ಟಿ ಮುಂದೆ ತೆರೆದಿರುವುದು ಒಂದು ಚೆಲುವಿನ ಲೋಕ, ವರ್ಣಮಯ ಪ್ರಕೃತಿಯ ರಮಣೀಯವಾದ ಲಾಸ್ಯ. ಆದರೆ ಅದನ್ನು ಕಾಣುವ ಮನಸ್ಸು ಮುದುಡಿದ ಸ್ಥಿತಿಯಲ್ಲಿದೆ. ರಾಮನ ಮುಂದಿನ ಸರೋವರದ ಭಿತ್ತಿಯಲ್ಲಿ ಮೂಡುವ ನೆಲ-ಮುಗಿಲುಗಳ ಸಂಗಮವು ಅವನ ಮನಸ್ಸನ್ನು ರಂಜಿಸುವುದಿಲ್ಲ, ಬದಲಿಗೆ ಅವನ ರಿಕ್ತತೆಗೆ ಕನ್ನಡಿ ಹಿಡಿಯುತ್ತದೆ. ಆದುದರಿಂದಲೇ ಆ ದೃಶ್ಯವು ಅವನ ವಿರಹದ ವಿವಿಧ ಛಾಯೆಗಳನ್ನು ಪ್ರತಿಬಿಂಬಿಸುತ್ತದೆ. ಈ ಅಂತರ್ವಿರೋಧವು ಕೂಡಾ ಕವಿಯ ಪ್ರತಿಭೆಯ ಸಂಸ್ಪರ್ಶದಿಂದಾಗಿ ಕಲಾತ್ಮಕತೆಯನ್ನು ಪಡೆಯುತ್ತದೆ. ಸಹೃದಯ ಗ್ರಾಹ್ಯವಾಗುತ್ತದೆ.

ಈ ಮಾದರಿಯ ಹಲವು ಮಹೋಪಮೆಗಳು ಈ ಕಾವ್ಯದ ಉದ್ದಕ್ಕೂ ಎಡೆ ಪಡೆದಿವೆ. ಇಲ್ಲಿ ಕವಿಯು ಇವುಗಳನ್ನು ಯಾವುದೇ ನಿರ್ದಿಷ್ಟ ಭಾವದ ಅಭಿವ್ಯಕ್ತಿಗೆ ಸೀಮಿತಗೊಳಿಸಿಲ್ಲ.

ಕುಂಭಕರ್ಣನ ಮಹಾದೇಹದ ವರ್ಣನೆಯಲ್ಲಿ ಇದು ದುಡಿಯುವ ರೀತಿಯನ್ನು ಈ ದೃಷ್ಟಿಯಿಂದ ಗಮನಿಸಬಹುದು.

ಹೇರಿ
ಬಂಡೆಗೆ ಬಂಡೆಯಂ ಗಿರಿಯ ರಚಿಸಿದರೆನಲ್ಕೆ,
ಬೇರ್ಗಂಟುಗಳ್ ಪಿಣಿಲ್ ಪಿಣಿಲೆದ್ದು ಪೆರ್ಮರನ
ಮೆಯ್ಗೆ ಪೆಣೆದುವೆನಲ್ಕೆ, ಬೈರವನೊಡಲ ಸುತ್ತಿ
ನಿದ್ರೆಯಿಂದೆಳ್ಚೆ ಮೈ ಮುರಿವೆನಲ್ಕೆ
ಕುತ್ತಿಗೆಯ ಭುಜದ ಜಾನು ಜಂಘೆಯ
ವಕ್ಷದೇಶಸ್ಥಾಯಿ ವಜ್ರಖಂಡಗಳುರ್ಬಿ
ಮಾಂಸಜೀವಿಯ ಮಾಂಸಲ ಭ್ರುಕುಟಿಗಳ ತೆರೆದಿ
ತೋರ್ದುವು ಅಗುರ್ವಾಗಿ. ಪೊದೆಪೊದೆ ಕಿದರ್
ತಲೆ
ಮಾಂಕರಿಸತದ್ರಿ ಶಿಖರದ ಮುಖಿವನಾವರಿಸಿ
ಬೆಳೆದಟವಿಯಂ. ಇಭಸ್ಥೂಲತೆಯನಾಂತೊಡಂ
ಚಕಿತ ಹರಿಣನ ಚಲಚ್ಚರಣ ವೈಖರಿಯಿಂದ
ಚಿರತೆ ನೇಗಿಯಂ ಸರ್ಪರಸನ ವಿನ್ಯಾಸಮಂ
ಬಳ್ಳಿಮಿಂಚಂ ಮರೆಯುತಿರ್ದನ್ ನಿಶಾಚರಂ.
(ರಾ. ದ. 463).

ಕುಂಭಕರ್ಣನ ಸಮಸ್ತ ಶರೀರವನ್ನು ಒಂದು ಪ್ರತಿಮೆಯಾಗಿ ಈ ಮಹೋಪಮೆಯ ಗ್ರಹಿಸಿದೆ. ಅದರ ಅಂಗ ಪ್ರತ್ಯಂಗಗಳ ವಿಶಿಷ್ಟ ಗುಣಲಕ್ಷಣಗಳನ್ನು

(ಪುಟ 10ಕ್ಕೆ)

ವಿಜ್ಞಾನ:

## ಕಂಪ್ಯೂಟರ್

# ತೀರಿ ಹೋದ ನರ್ಗಿಸ್, ರಾಜಕಪೂರ್ ನಟಿಸಲಿರುವ ಚಲನಚಿತ್ರಗಳನ್ನು ಮತ್ತೆ ನೋಡುವೆವೆ? ಕೃತಕ ನಟನಟಿಯರು ಸಾಧ್ಯವೇ?

● ಇಂದಿರ ಮೂರ್ತಿ

ಚಲನ ಚಿತ್ರ ರಂಗದಲ್ಲೇ ಹೊಸದೊಂದು ದಾಖಲೆ ನಿರ್ಮಿಸಿದ ಚಿತ್ರ `ಜುರಾಸಿಕ್ ಪಾರ್ಕ್'. ಕೋಟ್ಯಂತರ ವರ್ಷಗಳ ಹಿಂದೆ ಜೀವಿಸಿದ್ದ ಡೈನೋಸಾರ್‌ಗಳೆಂಬ ಪೆಡಂಭೂತಗಳನ್ನು ಇಂದಿನ ಪರಿಸರದಲ್ಲಿ ಅತಿ ನೈಜತೆಯಿಂದ ತೋರಿಸಿದ ಚಿತ್ರ ಇದು. ಕಂಪ್ಯೂಟರ್ ಕೈವಾಡದಿಂದ ಚಲನಚಿತ್ರ ರಂಗಕ್ಕೆ ದೊರಕಬಹುದಾದ ಹೊಸ ಹಾದಿಗೆ ಈ ಚಿತ್ರ ಸಾಕ್ಷಿಯಾಗಿತ್ತು.

ಅನಂತರ ಬಿಡುಗಡೆಯಾದ ಎರಡು ಹಾಲಿವುಡ್ ಚಿತ್ರಗಳು `ಫಾರೆಸ್ಟ್ ಗಂಪ್' ಮತ್ತು `ಟ್ರೂಲೈಸ್'. ಇದೇ ಜಾಡಿನಲ್ಲಿ ನಡೆದು, ಕಂಪ್ಯೂಟರ್ ಸಹಾಯದಿಂದ ತಯಾರಾದ ಅನೇಕಾನೇಕ ಅಸಾಮಾನ್ಯ ಸನ್ನಿವೇಶಗಳಿಂದ ತುಂಬಿವೆ. ಉದಾಹರಣೆಗೆ - ದಿವಂಗತ ಜಾನ್ ಕೆನಡಿಯವರನ್ನು ಫಾರೆಸ್ಟ್ ಗಂಪ್‌ನ ನಾಯಕ ಭೇಟಿಯಾಗಿ, ಅವರ ಕೈ ಕುಲುಕಿ ಮಾತನಾಡುವ ದೃಶ್ಯ; ಟ್ರೂ ಲೈಸ್‌ನ ನಟ ಒಂದು ಸ್ಫೋಟನೆಯಿಂದ ಎರಡೂ ಕಾಲುಗಳನ್ನು ಕಳೆದುಕೊಂಡ ಮತ್ತಿತರ ಸಾಹಸ ದೃಶ್ಯಗಳು.

ಫ್ರಾನ್ಸಿನ ಥಾಲಮನ್ ದ್ವಯರು ಮೂರು ಆಯಾಮದಲ್ಲಿ ಉಜ್ಜೀವಿಸಲ್ಪಡುವ ಚಿತ್ರ ತಯಾರಿಯಲ್ಲಿ ಪರಿಣಿತರು. ಅವರಿಂದ ನಿರ್ಮಿತವಾದ ಫ್ಯಾಶನ್ ಶೋ ಒಂದರಲ್ಲಿ ಗತ ಹಾಲಿವುಡ್ ತಾರೆ ಮ್ಯಾರಿಲೀನ್ ಮನ್ರೋರವರನ್ನು ಬಳಸಲಾಗಿತ್ತು. ಆಕೆಯನ್ನು ಕಂಡ ಪ್ರೇಕ್ಷಕರು ಒಮ್ಮೆಗೆ ತಬ್ಬಿಬ್ಬಾದರು. ಮರು ಕ್ಷಣವೇ ಆಕೆಯನ್ನು ತಾರಸಿಯ ಸಮೀಪದ ಉಯ್ಯಾಲೆಯಲ್ಲಿ ನೋಡಿದಾಗ ಎಲ್ಲರಿಗೂ ತಿಳಿಯಿತು - ಇದು ಕೇವಲ ಕಂಪ್ಯೂಟರ್ ನಿರ್ಮಿತ ಕೃತಕ ಮ್ಯಾರಿಲೀನ್ ಎಂದು. ಕೃತಕ ನಟನಟಿಯರನ್ನು ಸೃಷ್ಟಿಸುವ ಹಾದಿಯಲ್ಲಿ ಈ ಪ್ರಯತ್ನ ಕಿರಿಯದೆಂದು ಕಂಡರೂ ಇದಕ್ಕಾಗಿ ತಗಲಿದ ವೆಚ್ಚ ಮತ್ತು ಕಾಲ ಹೆಚ್ಚಿನದೇ. ಮ್ಯಾರಿಲಿನ್‌ಳನ್ನು 2 ನಿಮಿಷ ತೆರೆಯ ಮೇಲೆ ತರಲು ಲಕ್ಷಾಂತರ ರೂಪಾಯಿ ಹಣವೂ ಎರಡು ವರ್ಷಗಳ ಕಾಲವೂ ವೆಚ್ಚವಾಗಿತ್ತು.

ಕಂಪ್ಯೂಟರ್‌ಗಳ ಸಾಮರ್ಥ್ಯ ವರ್ಷೇ ವರ್ಷೇ ಹೆಚ್ಚುತ್ತಿದೆ. ಅವು ಅಗ್ಗವೂ ಆಗುತ್ತಿವೆ. ಹಾಗಾಗಿ ಮುಂದಿನ ಕೆಲವೇ ವರ್ಷಗಳಲ್ಲಿ ಚಲನ ಚಿತ್ರ ನಿರ್ಮಾಪಕರು ಹೊರಾಂಗಣದಲ್ಲಿ ಚಿತ್ರೀಕರಿಸುವ ಅಗತ್ಯವಿಲ್ಲದೆ, ಮೂರು ಆಯಾಮಗಳ ಕಂಪ್ಯೂಟರ್ ಸ್ಟುಡಿಯೋಗಳಲ್ಲಿ ತಮ್ಮ ಕಲ್ಪನೆಗೆ ಬಂದ ದೃಶ್ಯಗಳನ್ನು ತಯಾರಿಸುವ ಸಾಧ್ಯತೆ ನಿಜಕ್ಕೂ ಇದೆ. ವಿಶೇಷ ಪರಿಣಾಮ ಉಳ್ಳ ದೃಶ್ಯಗಳನ್ನು ಕಂಪ್ಯೂಟರ್ ಸಹಾಯದಿಂದ ತಯಾರಿಸಿದರೆ ವೆಚ್ಚ ಕಡಿಮೆಯಾಗುತ್ತದೆ. ನಟಿಸುವ ಪಾತ್ರಧಾರಿಗಳಿಗೆ ಎಳ್ಳಷ್ಟೂ ಅಪಾಯವಿಲ್ಲ. ಮುಂದೊಮ್ಮೆ ನಮ್ಮ ಟಿವಿ ಪರದೆ ಮೇಲೆ ಕಾಣುವ ರಾಮಾಯಣದಲ್ಲಿ ಕಲ್ಪನೆಯ ಅಂದಿನ ದಂಡಕಾರಣ್ಯದಲ್ಲಿ ನಾರುಮಡಿಯನ್ನುಟ್ಟ ಸೀತೆ ಕಾಣಿಸಲೂ ಸಾಧ್ಯ.

ಕಂಪ್ಯೂಟರ್ ನೆರವಿನಿಂದ ಕೃತಕ ಸನ್ನಿವೇಶಗಳನ್ನು ತಯಾರಿಸಲು ಬೇಕಾಗುವ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳಾದರೂ ಏನು? ಉದಾಹರಣೆಗೆ ಜುರಾಸಿಕ್ ಪಾರ್ಕ್‌ನ ಚಂಡಮಾರುತದ ದೃಶ್ಯ ನೋಡಿ. ಇಲ್ಲಿ `ಅರ್ಥ್‌ವಾಚ್' ಎನ್ನುವ, ಹವಾಮಾನದ ಸಾಫ್ಟ್‌ವೇರ್‌ನ್ನು ಉಪಯೋಗಿಸಿದೆ. ಇದರಿಂದ ಮಳೆ, ಗಾಳಿ, ಮಿಂಚು, ಹಿಮ ಇತ್ಯಾದಿಗಳನ್ನು ಪರದೆಯ ಮೇಲೆ ತೋರಿಸಲು ಸಾಧ್ಯ. ಟಿವಿ ಸಮಾಚಾರದೊಂದಿಗೆ ಈ ಸಾಫ್ಟ್‌ವೇರಿನ ಬಳಕೆ ಹೆಚ್ಚಿದೆ. ಇದರೊಂದಿಗೆ ಜುರಾಸಿಕ್ ಪಾರ್ಕಿನ ನಿರ್ದೇಶಕ, ತಾವು ಹಿಂದೆಂದೋ ಕೆಮರದಿಂದ ಸೆರೆಹಿಡಿದ, ಬಿರುಗಾಳಿಯ ಮುಂಚಿನ ವಾತಾವರಣದ ಬದಲಾವಣೆಗಳು ಮತ್ತು ಉಪಗ್ರಹಗಳಿಂದ ದೊರಕಿದ ನೈಜವಾದ ಚಿತ್ರಗಳೆಲ್ಲವನ್ನೂ ಹೊಂದಿಸಿ, ಮಾರ್ಪಡಿಸಿ ಸಿದ್ಧಮಾಡಿದ ದೃಶ್ಯವಿದು.

ಕಂಪ್ಯೂಟರ್‌ನಲ್ಲಿ ಹಿಡಿದಿಟ್ಟ ಎಲ್ಲ ರೀತಿಯ ಮಾಹಿತಿಗಳು (ಗ್ರಾಫಿಕ್ಸ್ ವೀಡಿಯೋ, ಧ್ವನಿ, ಸ್ಥಿರ ಚಿತ್ರಗಳು, ಪಠ್ಯ ರೂಪದ ಮಾಹಿತಿ) ಕೇವಲ ಎರಡೇ ಅಂಕಿಗಳಿಂದಾದ (0, 1) ಸರಪಣಿಗಳ ರೂಪದಲ್ಲಿರುವುದು ನಮಗೆ ತಿಳಿದ ವಿಷಯವೇ. ಈ ಡಿಜಿಟಲ್ ಕಟಡಿಯನ್ನು ಬೇಕಾದಂತೆ ಮಾರ್ಪಡಿಸಿ, ನಿಜಕ್ಕೂ ವಾಸ್ತವದಲ್ಲಿ ಇಲ್ಲದಿರುವ, ಕೇವಲ ಕಾಲ್ಪನಿಕ ದೃಶ್ಯಗಳನ್ನು ಆದರೆ ನೈಜವೇ ಎನ್ನುವ ಭ್ರಮೆಯನ್ನು ಬರಿಸುವ ಚಲನಚಿತ್ರದ ದೃಶ್ಯಗನ್ನು ಸೃಷ್ಟಿಸಲು ಸಾಧ್ಯ.

ಹಲವಾರು, ನಮ್ಮ ಕಲ್ಪನೆಗೂ ಮೀರಿದ ಅಸಾಮಾನ್ಯ ಸಾಹಸ ದೃಶ್ಯಗಳಿಂದ `ಟ್ರೂ ಲೈಸ್' ತುಂಬಿದೆ. ಇಂತಹ ದೃಶ್ಯವೊಂದರಲ್ಲಿ ಬಳಸಿರುವ ಸಾಮಗ್ರಿಗಳಿವು! ನಿಜವಾದ ಆಕಾಶ, ನಡೆದ ಸ್ಫೋಟನೆಯ ಒಂದು ವೀಡಿಯೋ ಚಿತ್ರ, ಮೂರು ಆಯಾಮಗಳಲ್ಲಿ ಉಜ್ಜೀವತೆಯಿಂದ ತಯಾರಾದ ಕ್ಷಿಪಣಿ, ದಟ್ಟ ಹೊಗೆ, ಫೈಬರ್ ಗಾಜಿನಿಂದ ನಿರ್ಮಿಸಿದ ವಿಮಾನ, ಅದರ ನಾಯಕ (ಸ್ಟಂಟ್ ಮನುಷ್ಯ ಅಲ್ಲ ಈತ) ಈ ವಿಮಾನವನ್ನು ವೇಗದಲ್ಲಿ ಸುತ್ತಿಸಲು ಬಳಸಿದ ಕ್ರೇನ್ (ಹಾರುವಂತೆ ತೋರಿಸಲು) ಅತ್ಯಂತ ಕುತೂಹಲಕಾರಿಯೂ, ಆಶ್ಚರ್ಯಕಾರಿಯೂ ಆದ ಈ ದೃಶ್ಯ ತಯಾರಾದದ್ದು ಈ ಬೇರೆ ಬೇರೆ ಮಾಹಿತಿಗಳನ್ನು ಹೆಣೆದು ಬೇಕಾದಂತೆ ಮಾರ್ಪಡಿಸಲು ಸೌಕರ್ಯ ದೊರಕಿಸುವ ಮೂರು ಆಯಾಮದ ಸ್ಟುಡಿಯೋ ಒಂದರಲ್ಲಿ.

ಮೂರು ಆಯಾಮಗಳ ಉಜ್ಜೀವತೆಗೆ ಬಳಕೆಯಲ್ಲಿರುವಂಥವು ಸಿಲಿಕಾನ್ ಗ್ರಾಫಿಕ್ಸ್ ವಿಧದ ಕಂಪ್ಯೂಟರ್‌ಗಳು. ಇವುಗಳ ನೆರವಿನಿಂದ ಶೀಘ್ರವಾಗಿ ಚಿತ್ರಗಳನ್ನು ರಚಿಸಿ, ಬೇಕಾದಂತೆ ಮಾರ್ಪಡಿಸಲು ಸಾಧ್ಯ. ಎಂಜಿನಿಯರುಗಳು ಬೈಸಿಕಲ್‌ನಿಂದ ಹಿಡಿದು ಗಗನ ನೌಕೆಯ ವರೆಗೆ ವಿವಿಧ ಯಂತ್ರಗಳ ಭಾಗಗಳನ್ನು ಚಿತ್ರಿಸಿ ಮಾರ್ಪಡಿಸುವ ತಯಾರಿಕೆಗೆ ತೊಡಗುತ್ತಾರೆ. ಔಷಧಗಳ ಅಣು ರಚನೆಯನ್ನು ತಯಾರಿಕೆಗೆ ಮುಂಚೆಯೇ ಕಂಪ್ಯೂಟರ್ ನೆರವಿನಿಂದ ರಚಿಸಿ, ಬೇರೆ ಬೇರೆ ದಿಕ್ಕುಗಳಿಂದ ಪರೀಕ್ಷಿಸಿ, ಅವುಗಳ ಕಾರ್ಯ ರೀತಿಯನ್ನು ತಿಳಿಯಲು ರಸಾಯನ ಶಾಸ್ತ್ರಜ್ಞರು ಪ್ರಯತ್ನಿಸುತ್ತಾರೆ.

ಮಾನವ ದೇಹವನ್ನು ಕಂಪ್ಯೂಟರ್ ಬಳಕೆಯಿಂದ 3 ಹಂತಗಳಲ್ಲಿ ನಿರ್ಮಿಸುತ್ತಾರೆ. ಮೊತ್ತ ಮೊದಲು ತಂತಿಯ ಬಲೆಯಿಂದಾದ ಬಗ್ಗಿಸಲಾಗದ ಒಂದು ಆಕೃತಿ ತಯಾರು ಮಾಡಿ ಅದಕ್ಕೆ ಒಂದು ಮೇಲ್ಪದರ ಹೊದಿಸುವರು. ಇದರ ಮೇಲೆ ಬಗ್ಗಿಸಲಾಗುವ ಮೇಲ್ಪದರವೊಂದನ್ನು ಸ್ಪ್ರಿಂಗ್‌ಗಳ ಸಹಾಯದಿಂದ ಜೋಡಿಸಿ, ಮೈ ಬಣ್ಣದ ಕಾಂತಿ, ನಯ, ಬಣ್ಣ ಇತ್ಯಾದಿಗಳನ್ನು ಲೇಸರ್ ಕಿರಣಗಳಿಂದ ಗ್ರಹಿಸಿ, ಈ ಪದರಕ್ಕೆ ವರ್ಗಾಯಿಸುತ್ತಾರೆ. ಸ್ಪ್ರಿಂಗ್‌ಗಳ ಸಹಾಯದಿಂದ ಮುಖದ ಹಾವಭಾವ ಬದಲಾಯಿಸಲು ಸಾಧ್ಯ.

ಉಜ್ಜೀವತತೆಗಾಗಿಯೇ - ಅಂದರೆ ಚಲನೆಯನ್ನು ಸಾಧ್ಯ ಮಾಡುವುದಕ್ಕಾಗಿಯೇ - ಹಲವಾರು

(ಪುಟ 10ಕ್ಕೆ)

# Lord Chaitanya Mata Prabhu - The Golden Avatara

What is the present need of the human society? It is no longer bounded by geographical limits to particular countries or communities. It is broader than in the middle ages and the world tendency is toward one state or one human society. The ideals of spiritual communism according to Srimad Bhagavatam are based more or less on the oneness of entire human society, nay, of the entire energy of the living beings. The need is felt by great thinkers to make this a successful ideology. Srimad Bhagavatam will fill this need in human society.

Human society has made rapid progress in the field of material comforts, education and economic development throughout the entire world. But there is a pinprick somewhere in the social body at large, and therefore there are large scale quarrels even over less important issues. There is need of a clue as to how humanity can become one in peace, friendship and prosperity with a common cause. Srimad Bhagavatam will fill this need for it is a cultural presentation for the re-spiritualisation of the entire human society.

Disparity in human society is due to lack of principles in a godless civilisation. There is God or the Almighty one, from whom everything emanates, by whom everything is maintained and in whom everything is merged to rest. Material science has tried to find the ultimate source of creation very insufficiently, but it is a fact that there is one ultimate source of everything that be. This is explained rationally and authoritatively in Srimad Bhagavatam.

In the modern age Lord Sri Chaitanya Mahaprabhu preached the Srimad Bhagavatam by practical demonstration. Since Sri Chaitanya Mahaprabhu is the absolute personality of God head, He is both Bhagwan and Bhagavatam in person and in sound. Therefore, his process of approaching the Srimad Bhagavatam is practical for all people of the world. Sri Chaitanya Mahaprabhu has said that any one regardless of what he is, who is well versed in the science of Krishna can become an authorised preacher or preceptor in the science of Krishna.

**Life and teachings of Lord Chaitanya**

Lord Chaitanya Mahaprabhu the great apostle of Love of God and father of the congregational chanting of the holy name of the Lord advented himself at Sridhama Mayapur, a quarter in the city of Navadvipa in Bengal on the Phalguni Purnima evening in the year 1407 Salabda (corresponding to Feb. 1486 by the Christian calender). His father Jagannath Mishra, a learned Brahmana came to Navadvipa as a student because at that time Navadvipa was considered to be the center of education and culture. He married Srimati Sachidevi daughter of Srila Nilambara Chakravarti the great learned scholar of Navadvipa. They had many children and most of them expired at an early age. The tenth and the youngest son who was named Visvambhara, later became known as Nimai Pandit and then after accepting the renounced order of life, Lord Sri Chaitanya Mahaprabhu.

Lord Chaitanya Mahaprabhu exhibited His transcendental activities for forty-eight years and then disappeared in the year 1455 Salabda at Puri.

For his first twenty-four years he remained at Navadvipa as a student and householder. He took the order of Sanyasa at the age of twenty-four. After taking Sanyasa, the Lord made His headquarters at Jagannath Puri due to the request of his mother Srimati Sachidevi. He remained for twenty-four years at Puri. For six years of this time he travelled continuously all over India (and especially throughout Southern India) preaching the Srimad Bhagavatam. He not only preached the Srimad Bhagavatam but also propagated the teachings of Bhagavad Gita as well in the most practical way.

Lord Sri Chaitanya Mahaprabhu is the self same Lord Krishna. In Kaliyuga however He appeared as a great devotee of the Lord in order to preach the people in general as well as to religionists and philosophers about the transcendental position of Sri Krishna, the primeval Lord and the cause of all causes. The essence of His preaching is that Lord Sri Krishna who appeared at Vraja Bhoomi as the son of the King of Vraja (Nanda Maharaja), is the supreme personality of God head and is therefore worshippable by all. Vrindavan Dhama is no different from the Lord because the name, fame, form and place where the Lord manifests Himself are all identical with the Lord as absolute knowledge. The highest form of transcendental worship of the Lord was exhibited by the Gopis of Vrajabhoomi in the form of pure affection for the Lord and Sri Chaitanya Mahaprabhu recommends this process as the most excellent mode of worship. He preaches that the ultimate goal of life for all human beings is to attain the stage of Prema or Love of God.

Many devotees of Lord Chaitanya like Srila Vrindavan Das Takura, Sri Lochana Das Takura, Srila Krishnadas Kaviraja Goswami, Sri Prabhodhananda Saraswati, Sri Rupa Goswami, Sri Sanatana Goswami, Sri Raghunatha Bhatta Goswami, Sri Jiva Goswami, Sri Gopala Bhatta Goswami, Sri Raghunatha Dasa Goswami and then in later stage within two hundred years, Sri Viswanath Chakravarthi, Sri Narottamadasa Takura, Sri Bhakti Vinode Takura and at last Sri Bhakti Siddhanta Saraswati Takura and many other great and renowned scholars and devotees of the Lord have prepared voluminous books and literatures on the life and precepts of Lord Chaitanya. They are based on the Sasthras like the Vedas, Puranas, Upanishads, Ramayana and Mahabharata and other authentic literatures approved by the recognised Acharyas. They are full of transcendental knowledge and unique in composition.

Lord Chaitanya in many of his Lilas has disclosed himself as Lord Sri Krishna.

He started the Sankirtan movement, i.e., the chanting of the holy names.

"Hare Krishna Hare Krishna Krishna. Krishna Hare Hare.

Hare Rama Hare Rama Rama Rama Hare Hare".

which is the Yuga Dharma for this age.

The Lord taught his disciple Sri Rupa Gosvami which also is a teaching to one and all about devotional service, comparing it to a creeper and advised him to protect the Bhakti creeper most carefully against the mad elephant offense against the pure devotees. In addition, the creeper has to be protected from the desires of self enjoyment, monistic liberation and perfection of the Hata Yoga system. They are all detrimental on the path of devotional service. Similarly violence against living beings and desire for worklly gain, worldly reception and worldly fame are all detrimental to the progress of the Bhakti or Bhagavata Dharma.

Pure devotional service must be freed from all desires for sense gratification, fruitive aspirations and culture of monistic knowledge. One must be freed from all kinds of designations and when one is thus converted into transcendental purity one can then serve the Lord by purified senses.

As long as there is desire to enjoy sensually or to become one with the supreme or to possess the mystic powers, there is no question of attaining the stage of our devotional service.

Transcendental devotional service has five stages of reciprocation.

1) The self-realization stage just after liberation from material bondage is called the Santa or the neutral stage.
2) After that, when there is development of transcendental knowledge of the Lord's internal opulences, the devotee engages himself in the Dasya stage.
3) By further development, of Dasya stage, a respectful fraternity with the Lord develops and above that a feeling of friendship on equal terms becomes manifest. Both these stages are called Sakhya stage or devotional service in friendship.
4) Above this is the stage of paternal affection towards the Lord and this is called the Vatsalya stage.
5) And above this is the stage of Conjugal Love and this stage is called the highest stage of Love of God, although there is no difference in any of the above stages. The last stage is called the Madhurya stage.

Lord Chaitanya left only eight slokas of his instructions, in writing and they are known as Sikshataka. All other literatures of His Divine cult were intensively written by the Lord's principal followers, in the six Gosvamis and their followers. The cult of Chaitanya philosophy is richer than any other and it is admitted to be the living religion of the day with the potency for spreading as Visva-Dharma or Universal Religion. This philosophy has been taken up by some enthusiastic sages like Bhakti Siddhanta Sarasvati Gosvami Maharaj & his disciples.

Excerpts from:
**'Srimad Bhagavatam'**
by
**His Divine Grace A. C. Bhakti Vedanta Prabhupada**

## AN EPISODE?

**- Nadigar Govinda Rao**

When I was working as commentary writer (Kannada) in Films Division, Govt. of India, some underneath secretary from Delhi visited Commentary Section. When he was going round he came to me and asked me, "What are you doing?" I said "I am doing nothing". He asked the Tamil commentary writer who was beside me "What are you doing?" He also said "I am doing nothing". The great official said "I don't like this duplication of work". I told the underneath secretary "I am doing nothing in Kannada. He is doing nothing in Tamil". Anyway said the officer, "Let there be no overlapping" I told him "Sir, we aim at synchronisation here not at overlapping". The great underneath secretary was a protagonist of Hindi. He coughed in Hindi and even yawned in Hindi and went away.

Was it an episode or a figment of my imagination?

## ಮುಂಬಯಿಯಲ್ಲಿ "ಕನ್ನಡ"ದ ಭವಿಷ್ಯ

(ಪುಟ 2ರಿಂದ)

ಬರೆಯುವ ಸದವಕಾಶ ಇಲ್ಲಿ ಇದೆ. ಕನ್ನಡಕ್ಕೂ ಇಂಥ ಸವಲತ್ತು ದೊರೆತರೆ ಎಷ್ಟು ಚೆನ್ನ! ಎಲ್ಲ ವಿಷಯಗಳನ್ನೂ ಕನ್ನಡದಲ್ಲಿ ಮೌಲ್ಯಮಾಪನ ಮಾಡಬಲ್ಲ ಪರೀಕ್ಷಕರು ನಮ್ಮಲ್ಲಿ ಸಿದ್ಧವಿದ್ದರೆ ಮಾತ್ರ ಈ ಬೇಡಿಕೆಯನ್ನು ಸರಕಾರದ ಮುಂದಿಡಬಹುದು. ಹೀಗೆ ಮಾಡುವುದು ಸಾಧ್ಯವೇ, ನೋಡಬೇಕು.

ಕನ್ನಡದ ಮಾಧ್ಯಮದ ಹೊರತಾಗಿ ಇಂಗ್ಲೀಷ್ ಮಾಧ್ಯಮದಲ್ಲಿ ಕನ್ನಡವನ್ನು ಒಂದು ವಿಷಯವಾಗಿ ಕಲಿಸುತ್ತಿದ್ದ ದಿನಗಳೂ ಇದ್ದುವು. ಆಗ ಕಾಲೇಜಿನಲ್ಲಿ ಕನಿಷ್ಠ ವಿದ್ಯಾರ್ಥಿಗಳ ಸಂಖ್ಯೆಗೆ ಬಾಧಕ ಒದಗಿದ್ದಿಲ್ಲ. ಯಾವಾಗ ಇದು ಮಾಯವಾಯಿತೋ ಅಂದಿನಿಂದ ಕಾಲೇಜಿನ ತರಗತಿಗಳು ಸೊರಗಿದವು. ಇದಕ್ಕೆ ಪೂರಕವಾಗಿ ಬೆಳಗ್ಗಿನ ಕಾಲೇಜುಗಳು ಮುಚ್ಚಲ್ಪಟ್ಟುದಲ್ಲದೆ ಹೊಸ ಶೈಕ್ಷಣಿಕ ನೀತಿಯೂ ಕೊಡಲಿಯೇಟನ್ನು ಹಾಕಿತೆನ್ನಬೇಕು. ಇಂಗ್ಲೀಷ್ ಮಾಧ್ಯಮದ ತರಗತಿಗಳಲ್ಲಿ ಕನ್ನಡ ವಿಷಯವನ್ನು ಉಳಿಸಿಕೊಳ್ಳುವ ಪ್ರಯತ್ನ ನಡೆದಷ್ಟೂ ಇಲ್ಲಿನ ಕನ್ನಡ ಶಿಕ್ಷಣಕ್ಕೆ ಬಲ ಬಂದೀತು. ಶಾಲೆಗಳಲ್ಲಿನ ಕಿರಿಯ ಕಾಲೇಜುಗಳ ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳ ಜೊತೆಯಲ್ಲ ಕಲಾ ವಿಭಾಗಗಳನ್ನೂ ಆರಂಭಿಸುವ ಸಾಧ್ಯತೆಗಳು ಕನ್ನಡದ ಬಗೆಗಿನ ಆಶಾಕಿರಣಗಳು. ಕನ್ನಡಿಗರದೇ ಆದ ಒಂದೆರಡು ಕಾಲೇಜುಗಳು ಈ ನಗರದಲ್ಲಿ ತಲೆ ಎತ್ತಿ ನಿಲ್ಲುವುದೂ ಇಂದಿನ ಬಹು ದೊಡ್ಡ ಅವಶ್ಯಕತೆ! ಅಂದಿನವರೆಗೆ ಈ ಕೊರಗು ತಪ್ಪಿದ್ದಲ್ಲ. ಕನ್ನಡದ ಬಗೆಗಿನ ಕೆಲಸ ಸತತ ನಡೆಯಲೇ ಬೇಕಾದುದರಿಂದ ಅದರ ಭವಿಷ್ಯ ಕೂಡ ನಿರ್ಣಾಯಕವಾದುದಲ್ಲ ಎಂದಿಷ್ಟೇ ಹೇಳಬಹುದು.

## ಸಂದರ್ಶನ

(ಪುಟ 4ರಿಂದ)

**ಸದ್ಯದಲ್ಲಿ ನೀವೇನಾದ್ರೂ ಬರೀತಿದ್ದೀರಾ?**

Advanced Educational Psychologyಯ ಬಗ್ಗೆ ಪುಸ್ತಕ ಬರೀತಾಯಿದ್ದೀನಿ.

``Hypnosis in Education'' ಎಂಬ ವಿಷಯದ ಬಗ್ಗೆ D.Lit.ಗೆ Thesis ಬರೆದು ಕೊಟ್ಟಿರುವ ಈಕೆಯ ಮತ್ತೊಂದು ಡಿಗ್ರಿಯ ನಿರೀಕ್ಷೆಯಲ್ಲಿದ್ದಾರೆ. ಇದಿಷ್ಟು ಅಲ್ಲದೆ ಬಹಳಷ್ಟು ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವ ಡಾ। ಉಷಾ ಸಮಾಜ ಸೇವಾಕರ್ತೆಯೂ ಹೌದು. ಅವರ ಸಾಧನೆಗಳಿಗಾಗಿ ಅವರನ್ನು ಅಭಿನಂದಿಸುವ 'ನೇಸರು' ಈಕೆ ಸಾಧಿಸಬಯಸುವುದೆಲ್ಲಕ್ಕೂ ಶುಭ ಹಾರೈಕೆಗಳನ್ನು ಕೋರುತ್ತದೆ.

# ಕರ್ನಾಟಕ ಸಂಗೀತಕ್ಕೆ ಸಂತ ಪುರಂದರದಾಸರ ಕೊಡುಗೆ

● ಪಿ. ಕೆ. ಶಂಕರನಾರಾಯಣ ರಾವ್

ಸಂತ ಪುರಂದರದಾಸರು `ಕರ್ನಾಟಕ ಸಂಗೀತ ಪಿತಾಮಹ' ಎಂಬ ಬಿರುದಾಂಕಿತರು. ಅವರು ತಮ್ಮ ಜಿಪುಣವಾದ ಜೀವನದಿಂದ ಬಿಡುಗಡೆ ಹೊಂದಿದ ಮೇಲೆ ಭಕ್ತಿ ಪಂಥದ ಮಾರ್ಗ ಹಿಡಿದು ಭಗವಂತನಲ್ಲಿ ಅನನ್ಯ ಶರಣಾದರು. ತಮ್ಮ ಎಲ್ಲಾ ಸಂಪತ್ತನ್ನು ತ್ಯಾಗ ಮಾಡಿ ಪತ್ನಿ-ಪುತ್ರರ ಸಮೇತರಾಗಿ ದೇಶ ಸಂಚಾರಕ್ಕೆ ಹೊರಟರು. ದಾರಿ ಸವೆಸುತ್ತಲೇ ಭಗವಂತನ ಲೀಲಾ ವಿನೋದಗಳನ್ನು ವರ್ಣಿಸುವ ಅನೇಕಾನೇಕ ದೇವರ ನಾಮಗಳನ್ನು ರಚಿಸಿದರು, ಹಾಡಿದರು, ಪ್ರಚಾರ ಮಾಡಿದರು. ಅವರ ಕಣ್ಣಿಗೆ ಎಲ್ಲೆಲ್ಲೂ ಆ ಭಗವಂತನ ಲೀಲೆಯೇ ಕಂಡು ಬಂದು, ತಮ್ಮ ಚಿಕ್ಕಂದಿನಲ್ಲಿ ಕಲಿತ ಸಂಗೀತ ಶಿಕ್ಷಣದ ಅನುಭವವನ್ನು ಉಪಯೋಗಿಸಿಕೊಂಡು ಕೀರ್ತನೆಗಳನ್ನು ರಚಿಸಿದರು. ಅವರ ರಚನೆಗಳಲ್ಲಿ ಕಂಡು ಬಂದ ನಾನಾ ಪ್ರಕಾರದ ರಚನೆಗಳು ಮುಂದಿನ ವಾಙ್ಮಯಕಾರರಿಗೆ ಮಾದರಿಯಾಯಿತು.

ದಾಸರಾಯರು ಕರ್ನಾಟಕ ಸಂಗೀತಕ್ಕೆ ಕೊಟ್ಟ ಅತೀ ಮುಖ್ಯವಾದ ಕೊಡುಗೆಯೆಂದರೆ, ಅವರು ಆಗಿನ ಮಾಯಮಾಳವ ಗೌಳ ರಾಗದಲ್ಲಿ ಹಾಕಿ ಕೊಟ್ಟ ಸರಳೆವರಸೆಗಳು, ಜಂಟಿ ವರಸೆಗಳು ಹಾಗೂ ಸುಳಾದಿ. ಸಪ್ತ ತಾಳಗಳಾದ ಧ್ರುವ ತಾಳ, ಮಠ್ಯ ತಾಳ, ರೂಪಕ ತಾಳ, ಝಂಪೆ ತಾಳ, ತ್ರಿಪುಟ ತಾಳ, ಅಟ್ಟ ತಾಳ ಹಾಗೂ ಏಕ ತಾಳದ ಅಲಂಕಾರಗಳು. ಇಂದಿಗೂ ಕರ್ನಾಟಕ ಸಂಗೀತದ ಪ್ರಾರಂಭಿಕ ಶಿಕ್ಷಣ ಇವುಗಳಿಂದಲೇ ನಡೆಯುತ್ತದೆ. ದಾಸರಾಯರು ಅದುವರೆಗೂ ಚಾಲ್ತಿಯಲ್ಲಿದ್ದ ಶಂಕರಾಭರಣ ಸ್ವರಗಳನ್ನು ಬಿಟ್ಟು ಬಾಲ್ಯ ಪಾಠಗಳನ್ನು ಮಾಳವ ಗೌಳದಲ್ಲಿ ರಚಿಸಿದ್ದಾರೆ. ಅವರ ಕಾಲದಲ್ಲಿ `ಮಾಳವ ಗೌಳ' ಮಾತ್ರವಾಗಿದ್ದ ರಾಗ ನಂತರ ಹದಿನಾರನೇ ಶತಮಾನದಲ್ಲಿ ಬಂದ ಪಂಚಮುಖಿಯವರ `ಚತುರ್ದಂಡ ಪ್ರಕಾಶ'ದಲ್ಲಿ ಒಂದು ಸ್ಥಾಯಿಯಲ್ಲಿರುವ ಹದಿನಾರು ಸ್ವರಗಳನ್ನಾಗಿ ವಿಂಗಡಿಸಿ ಎಪ್ಪತ್ತೆರಡು ಮೇಳಕರ್ತ ಅಥವಾ ಜನಕರಾಗಗಳನ್ನು ಚಾಲ್ತಿಗೆ ತಂದ ನಂತರ, ಆ ಜನಕ ರಾಗಗಳ ಕ್ರಮಸಂಖ್ಯೆಯನ್ನು ಸುಲಭವಾಗಿ ಜ್ಞಾಪಕ ಇಟ್ಟುಕೊಳ್ಳಲು ಅನುಕೂಲವಾಗುವಂತೆ ಆ ರಾಗದ ಹಿಂದೆ `ಮಾಯಾ' ಎಂಬ ಎರಡಕ್ಷರಗಳನ್ನು ಸೇರಿಸಿ ಇಂದಿನ `ಮಾಯಾ ಮಾಳವ ಗೌಳ' ರಾಗವಾಗಿದೆ. ಈ ಪದ್ಧತಿ ಕೇವಲ ಕರ್ನಾಟಕ ಸಂಗೀತ ಶಿಕ್ಷಣದಲ್ಲಿ ಮಾತ್ರ ನಡೆದು ಬಂದಿದೆ. ಮಿಕ್ಕೆಲ್ಲ ಪದ್ಧತಿಗಳಲ್ಲಿ ಅಂದರೆ ಹಿಂದೂಸ್ತಾನಿ, ಪಾಶ್ಚಾತ್ಯ, ಪೌರ್ವಾತ್ಯ ಸಂಗೀತಗಳಲ್ಲಿ ಬಾಲ್ಯ ಪಾಠಕ್ಕೆ ಶಂಕರಾಭರಣದ ರಾಗಗಳ ಸ್ವರಗಳನ್ನೇ ಉಪಯೋಗಿಸುವ ಪದ್ಧತಿಯಿದೆ.

ಈ ಮಾಯಾ ಮಾಳವ ಗೌಳದ ವಿಶೇಷವೇನೆಂದರೆ ಅದರ ಸ್ವರಗಳು ಈ ರೀತಿಯಲ್ಲಿವೆ.

ಷಡ್ಜ - ಶುದ್ಧರಿಷಭ - ಅಂತರ ಗಾಂಧಾರ - ಶುದ್ಧ ಮಧ್ಯಮ - ಪಂಚಮ - ಶುದ್ಧ ಧೈವತ ಹಾಗೂ ಕಾಕಲಿ ನಿಷಾದ - ತಾರಸ್ಥಾಯಿ ಷಡ್ಜ. ಈ ನಾಲ್ಕು ಜೋಡಿ ಸ್ವರಗಳು ಆರೋಹಣದಲ್ಲಿ ಬಂದರೆ ಅವರೋಹಣದಲ್ಲಿ ಅದೇ ಸ್ವರಗಳು ಹಿಮ್ಮುಖವಾಗಿ ಬರುತ್ತವೆ. ಇದರ ವೈಶಿಷ್ಟ್ಯವೆಂದರೆ ಷಡ್ಜ ರಿಷಭ ಸ್ವರಗಳು ಒಂದರ ಪಕ್ಕದಲ್ಲಿ ಒಂದು ಬರುತ್ತದೆ. ಅಂದರೆ ಷಡ್ಜಕ್ಕಿಂತ ರಿಷಭ ಅರ್ಧ ಸ್ವರ ಮಾತ್ರ ಮೇಲಿರುತ್ತದೆ. ಇದೇ ಸಂಬಂಧ ಗಾಂಧಾರ-ಮಧ್ಯಮ; ಷಡ್ಜ-ದೈವತ ಹಾಗೂ ನಿಷಾದ-ತಾರ ಷಡ್ಜಗಳಿಗೆ ಇರುವುದರಿಂದ ಪ್ರಾರಂಭದ ಪಾಠ ಕಲಿಯುವವರಿಗೆ ಸುಲಭದ ದಾರಿ ತೋರಿದಂತಾಗುತ್ತದೆ. ಅವರು ಈ ಮಾಯಾ ಮಾಳವ ಗೌಳ ರಾಗದ ಬಾಲ್ಯಪಾಠಗಳನ್ನು ರಚಿಸಿರುವುದೇ ಸಂಗೀತದಲ್ಲಿ ಅವರು ಎಷ್ಟು ಪಾರಂಗತರಾಗಿದ್ದರೆಂಬುದನ್ನು ಖಚಿತ ಪಡಿಸುತ್ತದೆ. ಸರಳೆಯ ನಂತರ ಜಂಟೀ ವರಸೆಗಳನ್ನು ಅಂದರೆ ಸ್ವರಗಳನ್ನು ಜಂಟಿಯಾಗಿ ಸಸ-ರಿರಿ-ಗಗ---- ಈ ರೀತಿಯಾಗಿ ಬೇರೆ ಬೇರೆ ವ್ಯತ್ಯಾಸ ಮಾಡಿದ್ದಾರೆ. ಇವುಗಳನ್ನು ಸಹ ಮಾಯಾ ಮಾಳವ ಗೌಳದಲ್ಲಿ ರಚಿಸಿದ್ದಾರೆ. ಇನ್ನು ಮುಂದಿನ ಪಾಠಕ್ಕೆ ಅಲಂಕಾರಗಳನ್ನು ಸಪ್ತ ತಾಳಗಳಲ್ಲಿ ರಚಿಸಿದ್ದಾರೆ.

`ಸುಳಾದಿ' ಎಂದರೆ ಸುಲಭದ ಹಾದಿ ಎಂದು ವ್ಯಾಖ್ಯಾನಕಾರರು ಕರೆದಿದ್ದಾರೆ. ಅಲಂಕಾರಗಳ ಮುಖಾಂತರ ಪ್ರಾರಂಭಿಕರಿಗೆ ಈ ಸುಳಾದಿ ಸಪ್ತ ತಾಳಗಳ ಪರಿಚಯ ಸುಲಭವಾಗಿ ಆಗುತ್ತದೆ. ಇದರ ನಂತರ ಪುರಂದರದಾಸರು ಪಿಳ್ಳಾರಿ ಗೀತೆಗಳನ್ನು ರಚಿಸಿ ಸ್ವರ-ಸಾಹಿತ್ಯ ಸಮನ್ವಯ ಮಾಡಿ ಸಣ್ಣ ಸಣ್ಣ ಕೃತಿಗಳನ್ನು ರಚಿಸಿದ್ದಾರೆ. (ಗಣಪತಿ-ಶಿವ-ಲಕ್ಷ್ಮಿ-ಕೃಷ್ಣ ಇತ್ಯಾದಿ ದೇವತೆಗಳ ಮೇಲೆ).

ಶ್ರೀ ಪುರಂದರದಾಸರ ಕೃತಿಗಳಲ್ಲಿ ಅನೇಕ ಬಗೆಗಳಿವೆಯೆಂದು ಆಗಲೇ ಹೇಳಿದ್ದೇನೆ. ಅವುಗಳಲ್ಲಿ ಭಕ್ತಿ ಗೀತೆಗಳು, ದೇವರ ನಾಮಗಳು, ನಿಂದಾ ಸ್ತುತಿಗಳು, ನೃತ್ಯಕ್ಕೆ ಅಳವಡಿಸುವ ಪುರಾಣ ಕಥಾ ಪ್ರಸಂಗಗಳು, ಭಜನೆಯ ಕೃತಿಗಳು, ಬೇರೆ ಬೇರೆ ಕ್ಷೇತ್ರಗಳ ದೇವತೆಗಳ ಸ್ತುತಿಗಳು, ವ್ಯವಹಾರದಲ್ಲಿ ಮಾನವನ ನಡಾವಳಿಗಳಿಗೆ ಸಂಬಂಧಿಸಿದಂತೆ ಕೃತಿಗಳು, ಸಾಮಾಜಿಕ ಪ್ರಜ್ಞೆಯ ಪದಗಳು ಹೀಗೆ ಅವರು ಉಪಯೋಗಿಸಿದ ಯಾವುದೇ ವಿಷಯವೂ ಇಲ್ಲ, ಇವುಗಳಲ್ಲದೆ ಅವರ ಕೃತಿಗಳಲ್ಲಿ ಉಗಾಭೋಗಗಳು ಹಾಗೂ ಅವರ ಅದ್ಭುತವಾದ ರಾಗ ತಾಳ ಮಾಲಿಕೆ ಸುಳಾದಿಗಳು ಹೀಗೆ ಅವರು ಮುಟ್ಟದ ವಿಷಯವೇ ಇಲ್ಲ. ಅವರ ಕೃತಿಗಳು ನಮ್ಮ ಸಮಾಜಕ್ಕೆ ಕನ್ನಡಿ ಹಿಡಿಯುವಂತಹ ಒಂದು ವಿರಾಟ ದರ್ಶನ. ಅದರಿಂದಲೇ ದಾಸವರ್ಯರ ಗುರುಗಳಾದ ವ್ಯಾಸರಾಯರೇ ಅವರ ಕೃತಿಗಳನ್ನು `ಪುರಂದರೋಪನಿಷತ್' ಎಂದು ಕರೆದಿದ್ದಾರೆ. ಅದುವರೆಗೂ ಸಂಸ್ಕೃತದಲ್ಲಿ ಮಾತ್ರವಿದ್ದ ವೇದ-ಪುರಾಣ-ಉಪನಿಷತ್ತುಗಳ ಸಾರವನ್ನು ಕ್ರೋಢೀಕರಿಸಿ ಜನ ಸಾಮಾನ್ಯರಿಗೂ ಅರ್ಥವಾಗುವಂತೆ ಸರಳ ಜನ ಭಾಷೆಯಾದ ಕನ್ನಡದಲ್ಲಿ ಬರೆದು ಉಪಕರಿಸಿದ್ದಾರೆ. ಕನ್ನಡದಲ್ಲಿ ಬರೆದುದಷ್ಟೇ ಅಲ್ಲ, ಆ ಕೃತಿಗಳನ್ನೆಲ್ಲಾ ಸಾಹಿತ್ಯಕ್ಕೆ ಪ್ರಾಮುಖ್ಯ ಕೊಟ್ಟು ಸಂಗೀತಕ್ಕೆ ಅಳವಡಿಸಿ ಜನ ಸಾಮಾನ್ಯರಲ್ಲಿ ಜಾಗೃತಿಯನ್ನುಂಟು ಮಾಡಿದ್ದಾರೆ.

ದಾಸರಾಯರಿಗೆ ಸಂಗೀತ ಪ್ರಜ್ಞೆ ಎಷ್ಟಿತ್ತೆಂದರೆ ಇಂದಿಗೂ ಅವರ ಕೆಲವು ಕೀರ್ತನೆಗಳನ್ನು ಕೇಳಿದರೆ ಆಯಾ ರಾಗಗಳ ಪಾಠವನ್ನೇ ಅಳವಡಿಸಿ ಹಾಡಿದ್ದಾರೆ. ಉದಾಹರಣೆಗೆ: ಶಂಕರಾಭರಣದಲ್ಲಿ `ಪೋಗದಿರೆಲೋ ರಂಗ'; ಭೈರವಿಯಲ್ಲಿ `ಓಡಿ ಬಾರಯ್ಯ ವೈಕುಂಠ ಪತಿ ನಿನ್ನ'; ಕಾನಡದಲ್ಲಿ `ನಾನಿನ್ನ ಧ್ಯಾನದೊಳಿರಲು'; ಬೇಹಾಗ್‌ನಲ್ಲಿ `ನಾನೇಕೆ ಬಡವನು'; ಕಲ್ಯಾಣಿಯಲ್ಲಿ `ಕಲ್ಲು ಸಕ್ಕರೆ ಕೊಳ್ಳಿರೋ'; ಆರಭಿಯಲ್ಲಿ `ಆಡಿದನೋ ರಂಗ'; ತೋಡಿಯಲ್ಲಿ `ಏನು ಧನ್ಯಳೋ'.... ಹೀಗೆ ಆಯಾ ರಾಗದ ರಸಪಾಕವನ್ನು ಅವರ ಕೃತಿಗಳು ಮೈಗೂಡಿಸಿಕೊಂಡಿದೆ. ಆದರೆ ಸಂತ ತ್ಯಾಗರಾಜರಂತೆ ಪುರಂದರದಾಸರು ನಾದೋಪಾಸಕರಲ್ಲ. ಅವರ ಮೂಲ ಉದ್ದೇಶ ಸಾಹಿತ್ಯ-ಸಂಗೀತದ ಸಮನ್ವಯದಿಂದ ಜನರಿಗೆ ಪ್ರಚಾರ ಮಾಡಿ ಸಮಾಜದ ಕುಂದುಕೊರತೆಗಳನ್ನು ಎತ್ತಿ ಹಿಡಿದು ನೀತಿ ಬೋಧನೆ ಮಾಡುವುದೇ ಆಗಿತ್ತು. ಆದರೆ ಅವರ ಸಂಗೀತ ಜ್ಞಾನ ಅತ್ಯಂತ ಉನ್ನತ ಮಟ್ಟದ್ದಾಗಿತ್ತು ಎಂಬುದರಲ್ಲಿ

ಸಂದೇಹವೇ ಇಲ್ಲ. ಮೇಲೆ ಹೇಳಿದಂತೆ ಅವರ ಕೃತಿಗಳನ್ನು ನೋಡಿದರೆ ಈಚಿನ ವಾಙ್ಮಯಕಾರರು ಎಷ್ಟು ಬಗೆಯ ಕೃತಿಗಳನ್ನು ಮಾಡಿದ್ದಾರೋ ಅಷ್ಟು ಬಗೆಯ ಕೃತಿಗಳನ್ನು ದಾಸರಾಯರು ಆಗಲೇ ರಚಿಸಿರುವುದು ಕಂಡು ಬರುತ್ತದೆ.

ಕಡೆಯದಾಗಿ ದಾಸರಾಯರ ಎರಡು ಬಗೆಯ ಕೃತಿಗಳಾದ `ಉಗಾಭೋಗ' ಮತ್ತು `ಸುಳಾದಿ'ಗಳನ್ನು ತೆಗೆದು ಕೊಳ್ಳೋಣ. `ಉಗಾಭೋಗ'ಗಳೆಂದರೆ ಅದರಲ್ಲಿ ದಾಸರು ಭಕ್ತನ ಅನಿಸಿಕೆಗಳನ್ನು ಚಾಟೋಕ್ತಿಗಳಲ್ಲಿ ಚುಟುಕಾಗಿ ಕೇವಲ ನಾಲ್ಕೈದು ಸಾಲುಗಳ ಕವಿತೆಗಳನ್ನು ನೂರಾರು ಏಕೆ ಸಾವಿರಾರು ರಚಿಸಿದ್ದಾರೆ. ಒಂದರಲ್ಲಿ ``ನನಗೆ ನೀ ತಂದೆ, ತಾಯಿ ಲಕ್ಷ್ಮೀದೇವಿ ನಿನಗೆ ಯಾರಿದ್ದಾರೆ? ನೀನೇ ಅನಾಥ ನಾನೇ ಸನಾಥ" ಎಂದಿದ್ದರೆ ಇನ್ನೊಂದರಲ್ಲಿ ``ಏಳುತ್ತ ಗೋವಿಂದಗೆ ಕೈಯ್ಯ ಮುಗಿವೆ, ಕಣ್ಣವೆ ತೆಗೆದು ನೋಡುವೆ ಶ್ರೀ ಕೃಷ್ಣನ, ನಾಲಿಗೆ ತೆಗೆದು ನಾರಾಯಣ ನರಹರಿ ಎನ್ನುವೆ, ಹೋಡ ಸಾಸಿರ ಗೋಪಿಯರ ಅರಸನ ನೆನೆವೆ, ಎನ್ನಾಳುವ ದೊರೆ ಪುರಂದರ ವಿಠಲ". ``ಬಲಿಯ ಮನೆಗೆ ವಾಮನ ಬಂದಂತೆ" ಇತ್ಯಾದಿ ಸಾವಿರಾರು ಚುಟುಕಗಳನ್ನು ರಚಿಸಿದ್ದಾರೆ. ಅವುಗಳನ್ನು ಯಾವುದಾದರೂ ಒಂದು ರಾಗದಲ್ಲಿ ಗಮಕ ರೀತಿಯಾಗಿ ಹಾಡಿ ಅದೇ ರಾಗದಲ್ಲಿ ಆ ಚುಟುಕಕ್ಕೆ ಹೊಂದುವಂತ ಕೃತಿಯನ್ನು ಹಾಡುವ ಸಂಪ್ರದಾಯ ಬಂದಿದೆ. ಇದರಲ್ಲಿ ನಾವು ಮೇಲೆ ಹೇಳಿರುವ ``ಏಳುತ್ತ ಗೋವಿಂದಗೆ'' ಎಂಬ ಉಗಾಭೋಗವನ್ನು ಅದರಲ್ಲಿರುವ ಐದು ಸಾಲು ಸಾಹಿತ್ಯವನ್ನು ಅಳವಡಿಸಿ ಹಂಸಾನಂದಿ ರಾಗದಲ್ಲಿ ಮೋಹಕವನ್ನಾಗಿ ಪರಿವರ್ತಿಸಿದ್ದಾನೆ.

ಇನ್ನು ಸುಳಾದಿಗಳನ್ನು ತೆಗೆದು ಕೊಂಡರೆ ದಾಸರಾಯರ ಸಂಗೀತ-ತಾಳ ಪ್ರಜ್ಞೆ ಎಷ್ಟರ ಮಟ್ಟದ್ದು ಎಂದು ಅರ್ಥವಾಗುತ್ತದೆ. ಅಲಂಕಾರಗಳಲ್ಲಿ ಸುಳಾದಿ ಸಪ್ತ ತಾಳಗಳನ್ನು ಉಪಯೋಗಿಸಿ ವೇದ ಪುರಾಣಗಳ ಪ್ರಸಂಗಗಳನ್ನು ರಾಗ ತಾಳ ಮಾಲಿಕೆಗಳ ಮಹಾಪೂರವನ್ನೇ ರಚಿಸಿದ್ದಾರೆ. ಸುಳಾದಿ ಎಂದರೆ ಸುಲಭವಾದ ಹಾದಿಯೆಂದು ವ್ಯಾಖ್ಯಾನಕಾರರು ಹೇಳಿದ್ದಾರೆ. ಆದರೆ ದಾಸರಾಯರು ಮೇಲ್ಪಂಕ್ತಿ ಹಾಕಿಕೊಟ್ಟ ಸುಳಾದಿಗಳು ಕಬ್ಬಿಣದ ಕಡಲೆಗಿಂತ ಕಠಿಣವಾದ ಸಂಗೀತ ಪ್ರಕಾರಗಳು. ಅವರ ಸುಳಾದಿಗಳು ಸುಮಾರು ನಾಲ್ಕೈದು ಸಾವಿರವಿರಬಹುದು. ಆದರೆ ನಮಗೆ ಲಭ್ಯವಿರುವುದು ಕೇವಲ ನೂರಾರು ಮಾತ್ರ. ಇಂದು ಈ ಸುಳಾದಿಗಳನ್ನು ಹಾಡುವವರೇ ವಿರಳವಾಗಿದ್ದಾರೆ. ಇಂತಹ ಅಮೋಘ ಕೃತಿಗಳು ಕೇವಲ ಪುಸ್ತಕದಲ್ಲಿ ಮಾತ್ರ ಅಚ್ಚಾಗಿ ಕೂತಿರುವುದು ದುರದೃಷ್ಟಕರ ಸಂಗತಿ. ಸಂಗೀತಕಾರರು ಹೆಚ್ಚು ಹೆಚ್ಚು ಸುಳಾದಿಗಳನ್ನು ಸರಿಯಾದ ರಾಗ ತಾಳಗಳಿಗೆ ಅಳವಡಿಸಿ ಹಾಡಿ ಪ್ರಚಾರ ಮಾಡಬೇಕಾದುದನ್ನು ತಮ್ಮ ಕರ್ತವ್ಯವೆಂದು ತಿಳಿಯಬೇಕಿದೆ. ನಾನು ಹೀಗೆ ಎಂಟು ಸುಳಾದಿಗಳನ್ನು ಪುರಂದರದಾಸರು ಅವರ ಕೃತಿಗಳಲ್ಲಿ ಪದೇ ಪದೇ ಹೇಳಿರುವ `ಬತ್ತೀಸ್' ರಾಗ ಅಂದರೆ ಮೂವತ್ತು ಎರಡು ರಾಗಗಳನ್ನು ಅಳವಡಿಸಿ ಸ್ವರಸಂಯೋಜನೆ ಮಾಡಿದ್ದೇನೆ. ಕೆಲವು ಸುಳಾದಿಗಳಲ್ಲಿ ಸಪ್ತ ತಾಳಗಳು ಸಪ್ತ ರಾಗಗಳಲ್ಲಿದ್ದರೆ ಇನ್ನು ಕೆಲವು ಕೇವಲ ನಾಲ್ಕೈದು ತಾಳಗಳನ್ನು ಮಾತ್ರ ಉಪಯೋಗಿಸಿದ್ದಾರೆ. ಒಂದೊಂದು ಸುಳಾದಿಯಲ್ಲಿ ವೇದ ಪುರಾಣಗಳಲ್ಲಿನ ಪ್ರಸಂಗದ ವಿಸ್ತಾರವಾದ ಕಲ್ಪನೆ ಬರುವಂತೆ ರಚಿಸಿದ್ದಾರೆ.

ಸುಳಾದಿ ಸುಲಭವಾದ ಹಾದಿಯಲ್ಲ, ಹಾಡುವವರಿಗೆ, ಸ್ವರ ಸಂಯೋಜಕರಿಗೆ, ಕಲಿಯುವವರಿಗೆ ಅತಿ ಕಠಿಣವಾದ ಹಾದಿ.

---

### ಕಂಪ್ಯೂಟರ್

(6ನೇ ಪುಟದಿಂದ)

ಸಾಫ್ಟ್‌ವೇರ್‌ಗಳು ಸಿದ್ಧವಾಗಿವೆ. ಜುರಾಸಿಕ್ ಪಾರ್ಕ್‌ಗಾಗಿ ತಯಾರಾದ ಸಾಫ್ಟ್‌ವೇರ್‌ನಿಂದ ಕಡಿಮೆ ವೆಚ್ಚದಲ್ಲಿ ಡೈನೋಸಾರ್‌ಗಳನ್ನು ಚಲಿಸಲು ಸಾಧ್ಯವಾಯಿತು. ಕಾಲೊಂದನ್ನು ಬೇಕಾದಲ್ಲಿ ಸರಿಸಿದಲ್ಲಿ ಬೇರೆಲ್ಲಾ ಅಂಗಗಳು ತಮಗೆ ತಾವೇ ಸಹಜವಾಗಿ ಚಲಿಸುವಂತೆ ಈ ಸಾಫ್ಟ್‌ವೇರ್‌ನಿಂದ ಮಾಡಲು ಸಾಧ್ಯ.

ಜಾಕ್ ಎನ್ನುವ ಸಾಫ್ಟ್‌ವೇರ್‌ನಿಂದ ಚಿತ್ರ ನಿರ್ಮಾಪಕರು ಏಳು, ಕೂರು, ನಡಿ ಮುಂತಾದ ಅಪ್ಪಣೆಗಳನ್ನು (ಇಂಗ್ಲೀಷ್‌ನಲ್ಲಿ) ಕೊಟ್ಟು, ಚಿತ್ರಗಳನ್ನು ಚಲಿಸಲು ಸಾಧ್ಯ. ಈ ಸಾಫ್ಟ್‌ವೇರ್ ಸಹಾಯದಿಂದ ಚಲಿಸುವ ಕ್ರೇಪಣೆಗಳು, ಬುಲ್‌ಡೋಜರುಗಳು ಅಮೆರಿಕದಲ್ಲಿ ಸಿದ್ಧವಾಗಿವೆ.

ಕೃತಕ ಪಾತ್ರಧಾರಿಗಳಿಗೆ ಮುಖಭಾವ ವ್ಯತ್ಯಾಸ ಮತ್ತು ನಡೆ ಸಾಧ್ಯವಾಗುವಂತೆ ಮಾಡಬಹುದಾದರೂ ಮಾತನಾಡುವುದನ್ನು ಕಲಿಸಲು ಕಷ್ಟ ಎನ್ನುತ್ತಾರೆ ತಜ್ಞರು. ಇಂದಿನ ಕಂಪ್ಯೂಟರ್‌ಗಳಿಗಿಂತ ಹತ್ತುಪಟ್ಟು ಚುರುಕಾಗಿ ಕೆಲಸ ಮಾಡುವ ಕಂಪ್ಯೂಟರ್ ದೊರಕಿದ್ದಲ್ಲಿ ಇದು ಸಾಧ್ಯವಾಗಬಹುದು. ಅಂದರೆ, ಕೃತಕ ರಾಜಕಪೂರ್, ನರ್ಗೀಸ್, ನಟಿಸಿದ ಚಿತ್ರಗಳನ್ನು ಕಾಣಲು ಇನ್ನೂ 6 ವರ್ಷ ಕಾಯಬೇಕಾದೀತು.

(ಬಾಲ ವಿಜ್ಞಾನದ ಸೌಜನ್ಯದಿಂದ)

---

### ``ರಾಮಾಯಣ ದರ್ಶನ''ದಲ್ಲಿ ಮಹೋಪಮೆ

(5ನೇ ಪುಟದಿಂದ)

ಬೇರೆ ಬೇರೆ ಹೋಲಿಕೆಗಳ ಮೂಲಕ ವಿಶದೀಕರಿಸಿದೆ. ಇಲ್ಲಿ ಕುಂಭಕರ್ಣನ ಶರೀರದ ಬಾಹ್ಯ ಸ್ವರೂಪವನ್ನು ಅದರ ಸ್ವಭಾವವನ್ನೂ ಏಕಕಾಲಕ್ಕೆ ಲಕ್ಷಿಸಲಾಗಿದೆ. ಬಂಡೆ, ಅಡವಿ ಮುಂತಾದ ಅತ್ಯಂತ ದೊಡ್ಡವಾದ ಉಪಮಾನಗಳು ತಮ್ಮ ಧ್ವನಿ ಶಕ್ತಿಯಿಂದಾಗಿ ಅಪೂರ್ವವೆನಿಸುತ್ತವೆ.

ಹೀಗೆ ಮಹೋಪಮೆಯು ಕಾವ್ಯಶರೀರದ ಒಳವಿನ್ಯಾಸವನ್ನೂ ಹೊರಗಿನ ಅಂದವನ್ನೂ ಏಕಕಾಲಕ್ಕೆ ನಿರ್ಧರಿಸುತ್ತ ಹೋಗುತ್ತದೆ. ರಾಮಾಯಣ ದರ್ಶನವು ಈ ಬಗೆಯ ಮಹೋಪಮೆಗಳಿಂದ ವಿಶಿಷ್ಟವೆನಿಸಿದೆ. ಈ ಮಹಾಕಾವ್ಯದ `ದರ್ಶನ ಧ್ವನಿ'ಯ ಗೆಲವಿಗಾಗಿ ಇವು ದುಡಿಯುತ್ತವೆ; ಏಕಕಾಲಕ್ಕೆ ಬಹುವಿಧವಾದ ಚಿತ್ರಾರ್ಪಿತ ಪ್ರತಿಮೆಗಳ ಸುಂದರ ಹಂದರವಾಗಿ ಮನಸೆಳೆಯುತ್ತವೆ. ಅಂತೆಯೇ, `ರಾಮಾಯಣ ದರ್ಶನಂ' ಇದು ಈ ಯುಗದ ಮಹಾಕಾವ್ಯವಾದರೆ `ಮಹೋಪಮೆ' ಇದು ಈ ಕಾವ್ಯದ ಸಾರಥಿಯಾಗಿದೆ.

---

ಚುಟುಕುಗಳು

### ಹೆಂಡ(ಅ)ತಿ

ಜೀವನದಲ್ಲಿ<br>
ಏಕಾಂಗಿಯಾದಾಗ<br>
ಬೇಕು . . . ಹೆಂಡತಿ<br>
ವೈರಾಗ್ಯವಾದಾಗ<br>
ಹೆಂಡ-ಅತಿ.

### ಬಡವ

ಶ್ರೀಮಂತರ<br>
ದೌರ್ಜನ್ಯದ<br>
ನಡುವೇ<br>
ಇದ್ದೂ . . .<br>
ಸತ್ತಂತೆ ಬದುಕುವವ.

### ಬೀರ್‌ಬಲ್ಲ

ಅಂದು . . .<br>
ಅಕ್ಬರನ ಆಸ್ಥಾನದಲ್ಲಿ<br>
ಇದ್ದ ಒಬ್ಬನೇ<br>
ಬೀರ್‌ಬಲ್ಲ<br>
ಇಂದು ಎಲ್ಲರೂ . . .<br>
Beer ಬಲ್ಲ-<br>
ವರೇ.

- ರವೀಂದ್ರ ಟಿ. ಶೆಟ್ಟಿ<br>
ಕಾಲ್ತೋಡು.

# SKIING AT AULI

• Chetan Prasad

Skiing is one of those adventure sports, of which, one sees a lot on television, But the thought of skiing never enters our minds as snow is not an everyday sight here. Thus, when we were presented with an opportunity to have a beginners course in skiing, we leapt for it without a moment's loss. The idea of going to a skiing course was given to us by our senior students who had gone for the same course, a year before us. These courses are conducted in the Garhwal region of Uttar Pradesh, by the Garhwal Mandal Vikas Nigam Ltd. (GMVN). Other skiing courses may exist in other Himalayan regions. I do not possess information about these courses.

The basic course fees are Rs. 1,800/- for the 7 days course and about Rs. 2,800/- or more for the 14 days Certificate Course. There exists a student concession of Rs. 400/- or more on these course fees. This amount took care of our boarding & lodging in the dormitories, along with breakfast, lunch, tea with biscuits and dinner for 7 whole days and ski equipment rental as well as travel in the chair lift to the slopes daily! Dirt cheap, isn't it!?

We expected the journey to be quite tiring and exhaustive, but on the contrary, the entire journey until Joshimath took us only 44 hours, all breaks inclusive. There are many buses all-throughout the day, at frequent intervals, from Delhi to Rishikesh which is a 6 hour ride (225 km.). Rishikesh to Joshimath takes you on one of the most breath taking bus rides through the Himalayas, on a single mountain road for 12 hours (250 km.). The trip to Auli from Joshimath is by the cable car run by GMVN, which goes from Joshimatru to Auli to Gorson.The total run distance is 4 km in which the car lifts us up from 1900 m MSL to 3100 m MSL. This, by the way, is one of the longest cable-car runs in India.

On a seven day course, one gets to ski only for six days and that too, only if he or she is lucky. This is because the first day is taken up in fittings. Each person's shoe size is noted and the ski-boots are tested for a proper fit. Then the skis are allotted with consideration of the height of the individual. Then skis are adjusted so that, the ski-boots are clamped into the grips properly. All the equipment we received were foreign (because, I don't think anybody manufactures such stuff here). The skis were made of some carbon fibre material and thus they were quite light for their size (not more than 3 kg/ski). The ski-boots are designed such that motion at the ankle is restricted and also each boot weighed almost 1 to 1.5 kgs. (felt more like it weighed a ton!), so it took some time getting used to walking in them. We had to walk for quite a stretch to get to the slopes (from our dormitories to the chair-lift and then from the upper terminus of the chair-lift, across the fields to the slope). The boots were great for walking in the snow, because they gave a total grip.




**Skiing Sessions**

The first excercise we learnt were to put on the skis and limber up by stretching. Ideally, our noses were supposed to touch the skis when we bent over completely, but very few people could do that. The first day of skiing was great since we took a lot of spills and generally got more familiar with the instructors and other people in the course. Getting control on the skis was tough since they seemed to have a mind of their own. Our batch had many people of all ages from 17 to the 30's (or 40's, may be). The ski sessions were 1 and 3/4 hours long and we had two a day. Our general schedule was some what like this: Tea at 0645, breakfast at 0800, reporting to slopes by 0930, skiing from 0945 till 1330 (or, till you are tired, whichever is earlier), with a break from 1130 to 1145, in which we had chilled orange juice (chilled because it used to be kept in a plastic bucket on the snow covered ground), lunch at 1400 and we were free to do what we wanted till dinner at 2000.

The number of people skiing on a particular day kept on dropping from the first day onwards, as many people felt bored to trudge up all the way carrying their skis on their shoulders. The altitude also took its toll, as some caught fever, but on the whole, every one was determined to ski every day.

Our course included learning of how to fall (very important!), how to get up after the fall on a slope, how to move up a slope with one's skis on, how to stop slowly or the snow-plough and finally, how to turn. The instructors were very friendly and informal and the bond with them grew till the last day. The feeling one got while skiing was totally exhilarating and we wished that we could keep on skiing till we dropped. The weather there

was quite crisp and cold with day time max. ranging from 4 to 8 deg C (on the hottest day) and night temp. dipping as low as -4 deg C, may be. We had no thermometer and so all these are estimate based on the fact that the snow there never melted.



**Dormitories at Auli**

The last three days of our course witnessed heavy snow fall (about 1.5 to 2 feet every night). We saw a blizzard on the day we left and the temperature with wind chill factor was at least -5 to -6 deg C, at 2 in the afternoon. Heavy snowing curtails the skiing time and we had to wind up an hour early.

Five to six days is a very short time to learn skiing but the sensation one gets while gliding over the snow has to be experienced and cannot be explained. Some people picked up the techniques of skiing much faster, as compared to others and no major injuries occurred as all knew how to fall safely. By the 4th & 5th day, we were good enough to handle ourselves reasonably.

The accommodation there was very comfortable. We had dormitories with each bed having a thick quilt. The dormitory had a central fire place, which used to keep us warm in the afternoons & evenings, although it took quite an effort to get it going, since the wood, which was snow drenched, was some what damp. The mess food was very wholesome, although one has to keep in mind that, at high altitudes, digestion is not very effective.

We were totally cut off from the outer world for 7 whole days as we never saw a newspaper out there and there was no television there. The feeling was unique and nice since we had a routine of our own there. On the whole, the trip was an extraordinary and very memorable one. Although the activity of skiing is only for the hale and healthy, since it does get strenuous at times in the rarefied air, it can be pursued by anyone who has the self-confidence.

---

**ಪ್ರಕಟಣೆಗಳು:**

## ಸಂಚಾರಿ ಗ್ರಂಥಾಲಯ

ಕರ್ನಾಟಕ ಸಂಘದ ಸಂಚಾರಿ ಗ್ರಂಥಾಲಯದ ಸೌಲಭ್ಯವನ್ನು ಈ ಕೆಳಕಂಡ ಸ್ಥಳ ಮತ್ತು ಸಮಯದಲ್ಲಿ ಪಡೆದುಕೊಳ್ಳಬಹುದು.

ತಿಂಗಳ ಮೊದಲನೇ ಹಾಗೂ ಮೂರನೇ ಶನಿವಾರ ಸಾಯಂಕಾಲ 3-30 ರಿಂದ 4-15ರ ವರೆಗೆ ಚೆಂಬೂರ್ ಕರ್ನಾಟಕ ಹೈ ಸ್ಕೂಲು;

ಸಂಜೆ 4-30 ರಿಂದ 5-15ರ ವರೆಗೆ ಬಸವೇಶ್ವರ ಸೊಸೈಟಿ;

ಸಂಜೆ 5-30 ರಿಂದ 6-00ರ ವರೆಗೆ ಘಾಟ್‌ಕೋಪರ್‌ನ ಪಂಥ್ ನಗರ್ ಮುನಿಸಿಪಲ್ ಶಾಲೆಯಲ್ಲಿ;

ತಿಂಗಳ ಮೊದಲನೇ ಹಾಗೂ ಮೂರನೇ ಭಾನುವಾರ ಮಧ್ಯಾಹ್ನ 2-00 ರಿಂದ 3-45ರ ವರೆಗೆ ಸಿ.ಬಿ.ಡಿ. ಬೇಲಾಪುರ್‌ನಲ್ಲಿ,

4-00 ರಿಂದ 5-00ರ ತನಕ ನೇರುಲ್‌ನಲ್ಲಿರುತ್ತದೆ;

ತಿಂಗಳ ಎರಡನೇ ಹಾಗೂ ನಾಲ್ಕನೇ ಭಾನುವಾರ ಚಾರ್‌ಕೋಪ್ (ಕಾಂಡಿವಿಲ್ಲಿ)ಯಲ್ಲಿ 3-00 ರಿಂದ 4-00ರ ವರೆಗೆ;

ಬೋರಿವಿಲಿಯ L. I. C. ಕಾಲೋನಿಯಲ್ಲಿ 4-15 ರಿಂದ 6-00ರ ವರೆಗೆ ಇರುತ್ತದೆ.

ಒಂದು ಪುಸ್ತಕ ಪಡೆಯಲು 50 ರೂ.ಗಳ ಠೇವಣಿ, ಎರಡು ಪುಸ್ತಕಗಳಿಗೆ 100 ರೂ.ಗಳ ಠೇವಣಿಯಿಟ್ಟು ಉಚಿತವಾಗಿ ಪುಸ್ತಕಗಳನ್ನು ಓದಲು ಪಡೆಯಬಹುದು. ಇದಲ್ಲದೆ ಮುಂಬೈ ಲೇಖಕರ ಕೃತಿ ಮಾರಾಟದ ವ್ಯವಸ್ಥೆಯನ್ನು ಸಹ ಮಾಡಲಾಗಿದೆ.

## ಸಂಗೀತ ನೃತ್ಯ ವಿದ್ಯಾರ್ಥಿ ವೇತನ

ಕರ್ನಾಟಕ ಸರಕಾರ ಅಕಾಡೆಮಿಯ ಮೂಲಕ ಸಂಗೀತ, ನಾಟ್ಯ ವಿದ್ಯಾರ್ಥಿಗಳಿಗೆ ನೀಡುತ್ತಿರುವ ವಿದ್ಯಾರ್ಥಿ ವೇತನವನ್ನು ಮುಂಬಯಿನ ಮೈಸೂರು ಸಂಗೀತ-ನಾಟ್ಯ ವಿದ್ಯಾರ್ಥಿ ವೃಂದಕ್ಕೂ ವಿಸ್ತರಿಸಿದೆಯೆಂದು ಕರ್ನಾಟಕ ಸಂಗೀತ ನೃತ್ಯ ಅಕಾಡಮಿಯ ಅಧ್ಯಕ್ಷೆ ಶ್ರೀಮತಿ ಚಂದ್ರಭಾಗಾ ದೇವಿಯವರು ಘೋಷಿಸಿದ್ದಾರೆ. ಡೊಂಬಿವಿಲಿಯ ಮೈಸೂರು ಸಂಗೀತ ವಿದ್ಯಾಲಯದಲ್ಲಿ ಮಾಡಿದ ಘೋಷಣೆಯನ್ನು ಸಭೆ ಕರತನಾಡದ ಮೂಲಕ ಸ್ವೀಕರಿಸಿತು. ಹೆಚ್ಚಿನ ಮಾಹಿತಿಗಾಗಿ ಮೈಸೂರು ಸಂಗೀತ ವಿದ್ಯಾಲಯವನ್ನು ಈ ಕೆಳಕಂಡ ವಿಳಾಸದಲ್ಲಿ ಸಂಪರ್ಕಿಸಿ.

Mysore Sangeetha Vidyalaya
15, Mohan Nivas,Pendse Nagar Road 4,
Dombivali (East), Thane Dist.

## ದೆಹಲಿಯಲ್ಲಿ 13ನೆ ರಾಷ್ಟ್ರೀಯ ಕನ್ನಡ ಸಮ್ಮೇಳನ

`ದೆಹಲಿ ಕನ್ನಡಿಗ' ಮಾಸಪತ್ರಿಕೆಯ ಆಶ್ರಯದಲ್ಲಿ, 13ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ ನಡೆಯಲಿದೆ. ರೂರ್ಕಿ ವಿಶ್ವ ವಿದ್ಯಾಲಯದ ಉಪಕುಲಪತಿಗಳೂ, ಖ್ಯಾತ ಲೇಖಕರೂ ಆದ ಪದ್ಮಶ್ರೀ ಡಾ। ಎಚ್. ಸಿ. ವಿಶ್ವೇಶ್ವರಯ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ। ಕೆ. ಮರುಳಸಿದ್ಧಪ್ಪ ಅವರು ಸಾಂಸ್ಕೃತಿಕ ಕಲಾ ಉತ್ಸವ ಉದ್ಘಾಟಿಸಲಿರುವರು. ಸಾಹಿತಿ ಡಾ। ವಿ. ಆರ್. ಪಂಚಮುಖಿ ಅವರು ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಿದ್ದಾರೆ. ಸುಪ್ರಸಿದ್ಧ ನೃತ್ಯ ಕಲಾವಿದೆ ಶ್ರೀಮತಿ ಕೋಮಲಾ ವರದನ್ ಅವರು ಸಾಂಸ್ಕೃತಿಕ ಬಾಂಧವ್ಯೋತ್ಸವವನ್ನು ಉದ್ಘಾಟಿಸಲಿರುವರು.

ಸಮ್ಮೇಳನದಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ವಿಚಾರ ಸಂಕಿರಣಗಳು, ಕವಿಗೋಷ್ಠಿ, ಮಹಿಳಾ ಉತ್ಸವ, ಬಾಲ ಗೋಷ್ಠಿ, ಸಂಗೀತ, ನೃತ್ಯ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು, ಪುಸ್ತಕ ಪ್ರದರ್ಶನ ಇವುಗಳನ್ನು ಹಮ್ಮಿಕೊಳ್ಳಲಾಗಿದೆ. ಸಾಹಿತಿಗಳು, ಕಲಾವಿದರು, ಪ್ರಾಧ್ಯಾಪಕರು, ಪತ್ರಕರ್ತರು, ಕನ್ನಡ ಸಂಸ್ಥೆಗಳ ಪ್ರತಿನಿಧಿಗಳು ಸೇರಿದಂತೆ ಸುಮಾರು ಎರಡು ಸಾವಿರ ಜನ ಸಮ್ಮೇಳನದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

# ಸಂಮೋಹಿನಿ ಚಿಕಿತ್ಸೆ (1)

● ಡಾ| ಉಷಾ ರಾವ್

ಆಧುನಿಕ ನಾಗರಿಕತೆಯು ಬರೀ ಭೌತಿಕ ಪ್ರಯೋಜನಗಳಿಂದ ತುಂಬಿದೆ. ಅಂತೆಯೇ ಪ್ರತಿಯೊಬ್ಬ ವ್ಯಕ್ತಿಯೂ ಸುಖಿಯಾಗಿರಬೇಕು. ಆದರೆ ವಾಸ್ತವ ಪರಿಸ್ಥಿತಿ ಹಾಗಿಲ್ಲ. ಈ ಬಗ್ಗೆ ಸರಿಯಾಗಿ ಗಮನ ಹರಿಸಿದಾಗ ಈ ಆಧುನಿಕ ಸಮಾಜವೇ ಎಲ್ಲ ಬಗೆಯ ಅನಾರೋಗ್ಯ ಮತ್ತು ಅಸೌಖ್ಯಗಳಿಗೆ ಆಳವಾದ ಬೇರೂರಿದ ಕಾರಣ ಎಂಬುದು ಗೊತ್ತಾಗುತ್ತದೆ.

ವಾಸ್ತವವಾಗಿ ಹೇಳುವುದಾದರೆ ಒತ್ತಡಗಳು ಹಾಗೂ ಬಳಲಿಕೆಗಳ ಸಮಸ್ಯೆ ಒಂದು ಮಗುವಿನ ಜನನದೊಂದಿಗೇ ಪ್ರಾರಂಭವಾಗುತ್ತದೆ. ಕಿಂಡರ್ ಗಾರ್ಟನ್‌ಗೆ ಅಡ್ಮಿಷನ್‌ನಿಂದ ಹಿಡಿದು ವೃತ್ತಿಪರ ಶೈಕ್ಷಣಿಕ ಅರ್ಹತೆ ಪಡೆಯುವವರಿಗೆ ಆತ ಅಥವಾ ಆಕೆ ಲೆಕ್ಕವಿಲ್ಲದಷ್ಟು ಅಡ್ಡಿಗಳು ಹಾಗೂ ಅಡಚಣೆಗಳನ್ನು ಎದುರಿಸಬೇಕಾಗುತ್ತದೆ. ಒಂದೊಂದು ಹಂತದಲ್ಲೂ ಜೀವನದ ಎಲ್ಲ ವಿಭಾಗಗಳಲ್ಲೂ ಒಂದಲ್ಲ ಒಂದು ಬಗೆಯ ಸ್ಪರ್ಧೆ ಇರುತ್ತದೆ. ಇದು ಅಪಾರ ಆತಂಕ ಹಾಗೂ ಉದ್ರೇಕವನ್ನು ಉಂಟು ಮಾಡುತ್ತದೆ. ಇವೆಲ್ಲವುಗಳ ಫಲಿತಾಂಶ ಹತಾಶೆ ಮತ್ತು ಮನಶ್ಶಾಂತಿಯ ನಷ್ಟ.

ಸ್ತ್ರೀಯರ ಪರಿಸ್ಥಿತಿ ಪುರುಷರಿಗಿಂತ ಹೆಚ್ಚು ಶೋಚನೀಯ ಎಂದು ತೋರುತ್ತದೆ. ಗೃಹಕೃತ್ಯವನ್ನು ನಡೆಸುವುದರ ಜತೆಗೆ ಪತಿಯ ಆದಾಯದ ಕೊರತೆ ತುಂಬಲು ದುಡಿಯುವುದೂ ಸೇರಿ ಆಕೆ ಹೆಚ್ಚು ಕಾತರ ಹಾಗೂ ಉದ್ವೇಗಕ್ಕೊಳಗಾಗುತ್ತಾಳೆ. ಈಗ ಮಾನಸಿಕ ಒತ್ತಡವು ಜೀವನದ ಒಂದು ಅವಿಭಾಜ್ಯ ಅಂಗವಾಗಿ ಹೋಗಿದೆ.

ಇದೆಲ್ಲದರ ಫಲಿತಾಂಶವೇನು? ನಾನಾ ಬಗೆಯ ಮಾನಸಿಕ ತೊಂದರೆಗಳನ್ನು (ಸೈಕೋ ಸೊಮಾಟಿಕ್ ಡಿಸಾರ್ಡರ್ಸ್) ಹೊಂದಿರುವವರ ಸಂಖ್ಯೆ ಅಪಾರವಾಗಿ ಹೆಚ್ಚಾಗಿದೆ. ಈ ಬಗೆಯ ಜನರ ಬಗೆಗೆ ಹೇಗೆ ವ್ಯವಹರಿಸುವುದು? ಅವರಿಗೆ ಯಾವ ಬಗೆಯ ಚಿಕಿತ್ಸೆ ಮಾಡಬೇಕು? ಇಂಥ ಅನೇಕ ಬಗೆಯ ಪ್ರಶ್ನೆಗಳು ಮನಸ್ಸಿನ ಮುಂದೆ ಬಂದು ನಿಲ್ಲುತ್ತವೆ.

ಈ ವಿಷಯಗಳ ಬಗೆಗೆ ನಾವು ಮತ್ತಷ್ಟು ಆಳವಾಗಿ ಯೋಚಿಸಿದಾಗ ಸಾಮಾನ್ಯವಾಗಿ ವೈದ್ಯರು ಇಂಥವರಿಗೆ ಟ್ರ್ಯಾಂಕ್ವಿಲೈಸರ್‌ಗಳನ್ನು (ಶಾಂತಗೊಳಿಸುವ ಔಷಧಿಗಳನ್ನು) ನೀಡುವುದು ಕಂಡು ಬರುತ್ತದೆ. ಕೆಲವೊಮ್ಮೆ ಭಾರೀ ಡೋಸ್‌ಗಳನ್ನು ನೀಡಲಾಗುವುದು. ಸಾಮಾನ್ಯ ವೈದ್ಯರಿಂದ ಯಾವ ಗುಣವೂ ಕಾಣದಿದ್ದರೆ ಆಗ ಅವರನ್ನು ಮನೋವ್ಯಾಧಿ ಚಿಕಿತ್ಸಕರ ಬಳಿ ಕಳುಹಿಸಲಾಗುವುದು!

ಆದರೆ ಅನಂತರ ಏನಾಗುತ್ತದೆ? ಇದು ಯಾರಿಗೂ ಗೊತ್ತಿಲ್ಲ ಎಂದು ತೋರುತ್ತದೆ. ಈ ರೋಗಿಗಳಿಗೆ ಅದೇ ಟ್ರ್ಯಾಂಕ್ವಿಲೈಸರ್‌ಗಳು ಹಾಗೂ ಆಂಟಿ ಡಿಪ್ರೆಸಿವ್ ಔಷಧಿಗಳನ್ನು ಮನೋವ್ಯಾಧಿ ಚಿಕಿತ್ಸಕರು ಮತ್ತೆ ನೀಡುವರು. ಮತ್ತು ಅಲ್ಲೊಮ್ಮೆ ಇಲ್ಲೊಮ್ಮೆ ಮೈಲ್ಡ್ ಷಾಕ್ ನೀಡಲಾಗುತ್ತದೆ. ಈ ಚಿಕಿತ್ಸಕರ ಪ್ರಾಮಾಣಿಕ ಪ್ರಯತ್ನದಿಂದ ಕಾತರತೆ, ಡಿಪ್ರೆಷನ್ (ಕುಸಿತ) ಚಿಹ್ನೆಗಳು ತಾತ್ಕಾಲಿಕವಾಗಿ ದೂರವಾಗುವುದೇ ಹೊರತು ಅದರ ಮುಖ್ಯ ಕಾರಣದ ಬಗೆಗೆ ಆಳವಾಗಿ ಪರಿಶೀಲಿಸುವುದಿಲ್ಲ. ಇಂಥ ಕಾರಣಗಳಿಂದಾಗಿ ಈ ರೋಗಿಗಳು ತಾವಾಗಿಯೇ ಸಮ್ಮೋಹಿನಿ ಚಿಕಿತ್ಸಕರ ಬಳಿ ಬರುತ್ತಾರೆ ಅಥವಾ ಮನೋವ್ಯಾಧಿ ಚಿಕಿತ್ಸಕರಿಂದ ಕಳುಹಿಸಲ್ಪಡುತ್ತಾರೆ.

ಕೆಲವು ಸಂದರ್ಭಗಳಲ್ಲಿ ಮನೋರೋಗ ಚಿಕಿತ್ಸಕರು ಈ ರೋಗಿಗಳಿಗೆ ಮಾನಸಿಕ ವಿಶ್ಲೇಷಣೆ (ಸೈಕೋ ಅನಾಲಿಸಿಸ್) ನಡೆಸಿ ಸೈಕೋಥೆರಪ್ಯೂಟಿಕ್ ಚಿಕಿತ್ಸೆಯನ್ನು ನೀಡುವರು. ಇಂಥ ವಿಶ್ಲೇಷಣೆಯು ಸಮಸ್ಯೆಯ ಮೂಲಕಾರಣವನ್ನು ಪತ್ತೆ ಹಚ್ಚಲು ಸಹಾಯ ಮಾಡುವುದು ನಿಜ. ಆದರೆ ಕೆಲವು ಸಂದರ್ಭಗಳಲ್ಲಿ ಅದು ರೋಗಿಗೆ ಹೆಚ್ಚು ಸಹಾಯಕವಾಗುವಂತೆ ತೋರುವುದಿಲ್ಲ. ಅದೂ ಅಲ್ಲದೆ ಸೈಕೋ ಅನಾಲಿಸಿಸ್ ತಂತ್ರವು ಸಾಕಷ್ಟು ಸಮಯವನ್ನು ತೆಗೆದುಕೊಳ್ಳುವುದು. ಬಹಳ ನಿಧಾನ ಮತ್ತು ದುಬಾರಿಯೂ ಕೂಡ. ಆದುದರಿಂದಲೇ ಬಹಳ ಮಂದಿ ಇದರಿಂದ ಕಳಚಿಕೊಳ್ಳುವರು.

ಮೇಲೆ ಹೇಳಿದ ವಿಧಾನಗಳಿಗೆ ಹೋಲಿಸಿದರೆ ಸಂಮೋಹಿನಿ ಚಿಕಿತ್ಸಾ ಪದ್ಧತಿಯು ಬಹಳ ಸರಳವಾದುದು, ಹೆಚ್ಚು ಸಮಯ ಹಿಡಿಯುವುದಿಲ್ಲ, ಅಷ್ಟು ದುಬಾರಿಯೂ ಅಲ್ಲ. ಜತೆಗೆ ಸ್ವಯಂ ಆಗಿ ಚಿಕಿತ್ಸೆಯನ್ನು ಮಾಡಿಕೊಳ್ಳಬಹುದು.

ಈ ವಿಧಾನದ ಬಗ್ಗೆ ತಿಳಿದುಕೊಳ್ಳಲು, ಮೊಟ್ಟ ಮೊದಲಾಗಿ ಈ ಸಂಮೋಹಿನಿ ಚಿಕಿತ್ಸೆಯ (ಸೈಕೋ ಥೆರಪಿ) ತಂತ್ರವನ್ನು ಸ್ಪಷ್ಟವಾಗಿ ವಿವರಿಸುವುದು ಅಗತ್ಯ.

ಇದು ರೋಗಿಯನ್ನು ಸಂಮೋಹನಾವಸ್ಥೆಯಲ್ಲಿ (ಟ್ರಾನ್ಸ್) ಇಡಲಾಗುವ ಚಿಕಿತ್ಸಾ ವಿಧಾನ. ಅನಂತರ ಕೆಲವು ಸೂಚನೆಗಳನ್ನು ನೀಡಲಾಗುವುದು. ಹೇಗೇ ಇರಲಿ, ಸೂಚನೆಗಳನ್ನು ನೀಡುವುದಕ್ಕೆ ಸಂಮೋಹಿನಿ ಚಿಕಿತ್ಸಾ ತಜ್ಞರು ರೋಗಿಯ ಸಂಪೂರ್ಣ ಇತಿಹಾಸವನ್ನು ಅಧ್ಯಯನ ಮಾಡುವರು ಅಥವಾ ತಿಳಿದುಕೊಳ್ಳುವರು. ಅನಂತರ ಈ ವ್ಯಾಧಿಯ ಪೂರ್ವ ಪರಿಶೀಲನೆ ಮತ್ತು ವಿಷಯಗಳ ಪೃಥಕ್ಕರಣದ ಮೂಲಕ ಸಂಮೋಹಿನಿ ಚಿಕಿತ್ಸಕರು ಸಂಪೂರ್ಣ ರೋಗ ಲಕ್ಷಣ ವಿವರಗಳನ್ನು ತಯಾರಿಸುವರು. ಈ ವಿವರಗಳ ಸಹಾಯದಿಂದ ರೋಗಿಗೆ ಸೂಚನೆಗಳನ್ನು ನೀಡಲಾಗುವುದು.

ಸಂಮೋಹಿನಿ ಅಥವಾ ವಶ್ಯಸುಪ್ತಿಯ ಸೂಚನೆಗಳು ಕುಶಲ ಬಳಕೆಯಿಂದ ಬದಲಾಯಿಸಿದಂಥ ಪ್ರಜ್ಞಾವಸ್ಥೆ, ಇದು ರೋಗಿಯ ಹಿಂಜರಿಯುವ ಪ್ರವೃತ್ತಿ ಹಾಗೂ ಯೋಚನೆಗಳನ್ನು ಕಡಿಮೆ ಮಾಡಿ, ರೋಗಿ ವಿಶ್ರಾಂತಿ ಸ್ಥಿತಿಯನ್ನು ತಲುಪುವಂತೆ ಮತ್ತು ಆತ ಅಥವಾ ಅವಳು ಸೂಚನೆಗಳನ್ನು ಗ್ರಹಿಸುವಂತೆ ಮಾಡುವುದು. ಈ ಕಾರಣಕ್ಕಾಗಿಯೇ ರೋಗಿಗಳನ್ನು ಸಂಮೋಹನ ಅವಸ್ಥೆಗೊಳಪಡಿಸಿ ಸೂಚನೆಗಳನ್ನು ನೀಡಲಾಗುವುದು.

ಔಷಧಿಗಳು ಅಥವಾ ಷಾಕ್ ಟ್ರೀಟ್‌ಮೆಂಟ್ ರೋಗಿಗೆ ಆತನ ಅಥವಾ ಆಕೆಯ ವ್ಯಾಧಿಯ ಚಿಹ್ನೆಗಳು ತಾತ್ಕಾಲಿಕವಾಗಿ ದೂರವಾಗುವಂತೆ ಮಾತ್ರ ಮಾಡಬಲ್ಲವು. ಇದರಿಂದ ಕೆಲವು ಹೊಸ ವ್ಯಾಧಿ ಚಿಹ್ನೆಗಳು ಉಂಟಾಗಲು ಹಾದಿಯಾಗಬಹುದು! ಒತ್ತಡ ಹಾಗೇ ಮುಂದುವರಿಯುವುದು. ಆದುದರಿಂದ ವ್ಯಕ್ತಿತ್ವದಲ್ಲಿನ ದೋಷಗಳು ಬದಲಾಗದೆ ಉಳಿಯುವುವು!!! ಆದುದರಿಂದ ಸಂಮೋಹಿನಿ ಚಿಕಿತ್ಸಾ ಪದ್ಧತಿಯು ಒತ್ತಡಗಳಿಗೆ ರೋಗಿಯ ಪ್ರತಿಕ್ರಿಯೆಗಳನ್ನು ಬದಲಾಯಿಸುವಂತೆ ಮಾಡುವಲ್ಲಿ ಉಪಯುಕ್ತವಾಗುವುದು. ಅಂಥ ಉಪಯುಕ್ತ ಸೂಚನೆಗಳನ್ನು ರೋಗಿಗೆ ಮತ್ತೆ ಮತ್ತೆ ಅಂದರೆ ದಿನಕ್ಕೆ ಐದರಿಂದ ಏಳು ಬಾರಿ ನೀಡುತ್ತಾ ಬಂದರೆ ಆರೋಗ್ಯವಂತ ವ್ಯಕ್ತಿತ್ವವನ್ನು ಉಂಟುಮಾಡುವುದು ಹಾಗೂ ರೋಗ ಚಿಹ್ನೆಗಳು ತಂತಾನೇ ಮಾಯವಾಗುವುವು.

ಸಂಮೋಹಿನಿ ಚಿಕಿತ್ಸಾ ಪದ್ಧತಿಯಲ್ಲಿ ರೋಗಿಗಳಿಗೆ ತಾನಾಗಿಯೇ ವಿಶ್ರಾಂತ ಸ್ಥಿತಿ ತಲುಪಲು ಮತ್ತು ತಾನಾಗಿಯೇ ಸೂಚನೆಗಳನ್ನು ನೀಡಿಕೊಳ್ಳಲು (auto suggestion) ಅಂದರೆ ಸ್ವ-ಸಂಮೋಹನ ವಿದ್ಯೆಯನ್ನು ಕಲಿಸಲಾಗುವುದು. ಈ ವಿಧಾನದಿಂದ ರೋಗಿ ಅಗತ್ಯ

ಬಂದಾಗ ತನ್ನ ಸಮಸ್ಯೆಗಳ ಬಗೆಗೆ ತಾನೇ ಚಿಕಿತ್ಸೆ ಮಾಡಿಕೊಳ್ಳುವ ವಿಧಾನಗಳನ್ನು ಕಲಿಯಬಹುದು.

ಸಂಮೋಹಿನಿ ಚಿಕಿತ್ಸೆಯ ಒಂದು ಬಹಳ ನಿರ್ದಿಷ್ಟವಾದ ಗುರಿ ತಲುಪುವ ಚಿಕಿತ್ಸಾ ವಿಧಾನ. ರೋಗಿಯನ್ನು ಗುಣಪಡಿಸಲು ಕೆಲವೇ ತಿಂಗಳುಗಳು ಸಾಕು. ಬೇರೆ ಪದ್ಧತಿಗಳಲ್ಲಿ ಮಕ್ಕಳ ವಿವಿಧ ಸಮಸ್ಯೆಗಳನ್ನು ಕೆಳಕಂಡಂತೆ ವರ್ಗೀಕರಿಸಲಾಗಿದೆ.

1. ಸಾಮಾನ್ಯ ರೋಗಗಳು :
   1. ಹಾಸಿಗೆಯಲ್ಲಿ ಮೂತ್ರಿಸುವುದು
   2. ಬೆರಳು ಚೀಪುವುದು
   3. ಉಗುರು ಕಚ್ಚುವುದು.
2. ವ್ಯಕ್ತಿತ್ವ ದೋಷಗಳು :
   1. ಸಂಕೋಚ ಪ್ರವೃತ್ತಿ
   2. ಅಂಜುಬುರುಕುತನ
   3. ವಿಪರೀತ ದುರಹಂಕಾರ
   4. ವಿಪರೀತ ಬಾಹ್ಯ ಪ್ರವೃತ್ತಿ
   5. ವಿಪರೀತ ಅಂತರ್ಮುಖಿ
   6. ವಿಪರೀತ ನೆಚ್ಚಿಕೆಯ ಸ್ವಭಾವ.
3. ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ದೋಷಗಳು:
   1. ಮತ್ತೆ ಮತ್ತೆ ವಿಫಲರಾಗುವುದು
   2. ಏಕಾಗ್ರತೆಯ ಅಭಾವ
   3. ವಿದ್ಯಾಭ್ಯಾಸದಲ್ಲಿ ನಿರಾಸಕ್ತಿ
   4. ಪರೀಕ್ಷೆಯ ಭಯ
   5. ಶಾಲೆಯ ಭೀತಿ, ಇತ್ಯಾದಿ, ಇತ್ಯಾದಿ.

ಕಡೆಯದಾಗಿ ಒಂದು ಮಾತು, ಸಂಮೋಹಿನಿ ಚಿಕಿತ್ಸೆಯು "ಒನ್ ಷಾಟ್ ಅಂಡ್ ಕ್ಯೂರ್ ಆಲ್" ಎಂಬಂತೆ ಅಲ್ಲ. ಅದರ ವಿವೇಚನಾಯುತ ಬಳಕೆಯಿಂದ, ಸಮಸ್ಯೆಯ ಮಕ್ಕಳ ಅನೇಕ ಸಾಧಾರಣ ಚಿಹ್ನೆಗಳನ್ನು ಪ್ರಾರಂಭದ ಹಂತದಲ್ಲಿ, ಅವು ಮಗುವಿನ ಅನಂತರದ ಜೀವನದಲ್ಲಿ ಭಾರೀ ಸಮಸ್ಯೆಗಳಿಗೆ ಬೆಳೆಯುವುದಕ್ಕೆ ಮುಂಚೆ, ಗುಣಪಡಿಸಬಹುದು.

ಸಂಮೋಹಿನಿ ಚಿಕಿತ್ಸೆಯು ವಿವಿಧ ಬಗೆಯ ರೋಗಿಗಳ ಚಿಕಿತ್ಸೆಯಲ್ಲಿ ಸಂಮೋಹಿನಿ ವಿದ್ಯೆಯನ್ನು ಬಳಸುವ ವಿಧಾನ. ವಾಸ್ತವವಾಗಿ ರೋಗಿಗಳು ಯಾವುದೇ ಸ್ಥಳದಲ್ಲಿ, ಲಭ್ಯವಿರುವ ಅತ್ಯಂತ ಕಡಿಮೆ ಸಮಯದಲ್ಲಿ, ತಮಗೆ ತಾವೇ ಚಿಕಿತ್ಸೆ ಮಾಡಿಕೊಳ್ಳಲು ಸಾಧ್ಯವಾಗುವ ಏಕೈಕ ಚಿಕಿತ್ಸಾ ವಿಧಾನ. ಸಿಹಿಮೂತ್ರ ರೋಗಿಯೊಬ್ಬನಿಗೆ ಡಾಕ್ಟರ ಸಹಾಯವಿಲ್ಲದೆ ತಾನೇ ಪ್ರತಿದಿನ ಇನ್‌ಸುಲಿನ್ ಇಂಜೆಕ್ಷ್ ಮಾಡಿಕೊಳ್ಳಲು ಕಲಿಸಿದಂತೆ ಇದು. ಇಂದು ಸಂಮೋಹಿನಿ ಚಿಕಿತ್ಸೆ ಪ್ರಪಂಚದಾದ್ಯಂತ ಹೆಚ್ಚು ಹೆಚ್ಚು ಮಾನ್ಯತೆ ಗಳಿಸಿದೆ. ಪ್ರಪಂಚ ಆರೋಗ್ಯ ಸಂಸ್ಥೆ (ಡಬ್ಲ್ಯು. ಎಚ್. ಓ.) ಮತ್ತು ಅಮೆರಿಕನ್ ಮೆಡಿಕಲ್ ಅಸೋಸಿಯೇಷನ್ ಕೂಡ ಅಂಗೀಕಾರ ನೀಡಿವೆ.

"ನನ್ನ ತಲೆಮಾರಿನ ಅತಿ ದೊಡ್ಡ ಶೋಧವೆಂದರೆ ಮಾನವರು ತಮ್ಮ ಮನೋಧೋರಣೆಗಳನ್ನು ಬದಲಿಸುವ ಮೂಲಕ ತಮ್ಮ ಜೀವನಗಳನ್ನು ಬದಲಾಯಿಸಿಕೊಳ್ಳಬಹುದು ಎಂಬುದು." - ವಿಲಿಯಂ ಜೇಮ್ಸ್

## ಸುತ್ತ ಮುತ್ತ

ಫೆಬ್ರವರಿ 3ರಂದು ಕರ್ನಾಟಕಸಂಘದ ಸಭಾಗೃಹದಲ್ಲಿ ಉದಯ ಕಲಾ ನಿಕೇತನದವರಿಂದ ``ಉಯಿಲು" ನಾಟಕ ಪ್ರದರ್ಶನಗೊಂಡಿತು.

ಫೆಬ್ರವರಿ 17ರಂದು ಕುರ್ಲಾದ ಬಂಟರ ಭವನದಲ್ಲಿ ತುಳು ಸಂಘ, ಮುಂಬೈ, ಬಂಟರ ಸಂಘ, ಮುಂಬೈ ಮತ್ತು ಕನ್ನಡ ಸಾಹಿತ್ಯ ಪರಿಷತ್ತು - ಮಹಾರಾಷ್ಟ್ರ ಘಟಕ ಇವರ ಸಂಯುಕ್ತ ಆಶ್ರಯದಲ್ಲಿ ಪ್ರಾ. (ಶ್ರೀಮತಿ) ಸುನೀತಾ ಎಂ. ಶೆಟ್ಟಿ ಇವರ ದತ್ತಿ ಉಪನ್ಯಾಸ ನಡೆಯಿತು. `ಅಕ್ಷಯ' ಮಾಸಿಕದ ಶ್ರೀ ಬಾಬು ಶಿವ ಪೂಜಾರಿಯವರು ``ನಾಗಾರಾಧನೆ" ಕುರಿತು ಉಪನ್ಯಾಸ ನೀಡಿದರು. ಡಾ| ತಾಳ್ತಜೆ ವಸಂತ ಕುಮಾರ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ತುಳು-ಕನ್ನಡ ಕವಿ ಗೋಷ್ಠಿಯೂ ನಡೆಯಿತು. ಜಗಜ್ಯೋತಿ ಕನ್ನಡ ವೃಂದ, ಮುಂಬೈ ವೃಂದಗಾನ ಕಾರ್ಯಕ್ರಮ ನಡೆಸಿಕೊಟ್ಟರು.

ಫೆಬ್ರವರಿ 18ರಂದು ಮೈಸೂರು ಅಸೋಸಿಯೇಷನ್ ಸಭಾಗೃಹದಲ್ಲಿ ಮುಂಬೈ ಕನ್ನಡ ಸಂಘದ ಆಶ್ರಯದಲ್ಲಿ ``ಶ್ರೀ ಪುರಂದರದಾಸರ 432ನೇ ಆರಾಧನ ಮಹೋತ್ಸವ" ಏರ್ಪಡಿಸಿತ್ತು. ಕಾರ್ಯಕ್ರಮದ ಅಂಗವಾಗಿ ಪುರಂದರದಾಸರ ದೇವರ ನಾಮ ಹಾಡುವ ಸ್ಪರ್ಧೆ ನಡೆಯಿತು. ಶ್ರೀ ಸತ್ಯಧ್ಯಾನ ವಿದ್ಯಾಪೀಠದ ಕುಲಪತಿಗಳಾದ ಪಂಡಿತ ಶ್ರೀ ವಿದ್ಯಾಸಿಂಹಾಚಾರ್ಯ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಡಾ| ಡಿ. ವಿ. ನಾಯಕ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ವಿ. ಭಟ್ ಗೌರವ ಅತಿಥಿಗಳಾಗಿದ್ದರು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ನಡೆಯಿತು. ಶ್ರೀಮತಿ ನಾಗವೇಣಿ ಶ್ರೀನಿವಾಸನ್, ಶ್ರೀಮತಿ ಗಾಯತ್ರಿ ಸುಂದರ ರಾಮು, ಕುಮಾರಿ ಅನುಪಮ ನರಸಿಂಹನ್ ಮತ್ತು ಸಂಗಡಿಗರು ಪುರಂದರದಾಸರ ಕೃತಿಗಳನ್ನು ಹಾಡಿದರು.

ಫೆಬ್ರವರಿ 25ರಂದು ಕರ್ನಾಟಕ ಸಂಘದ ಸಭಾಗೃಹದಲ್ಲಿ ಶ್ರೀ ವರದರಾಜ್ಯ ಆರ್ಯ ಪ್ರಶಸ್ತಿ ಪ್ರಧಾನ ಸಮಾರಂಭ ನಡೆಯಿತು. ಕನ್ನಡ ಮರಾಠಿ ಭಾಷೆ ಬಾಂಧವ್ಯ ಮತ್ತು ಕನ್ನಡ-ಮರಾಠಿ ಸ್ನೇಹ ಸೌಹಾರ್ದತೆ ವರ್ಧಿಸುವುದಕ್ಕೆ ಸಹಾಯ ಮಾಡಿದವರಿಗೆ ಕೊಡುವ ಪ್ರಶಸ್ತಿಯನ್ನು ಈ ಬಾರಿ ಶ್ರೀ ವಾಮನ ಬೇಂದ್ರೆ ಮತ್ತು ಶ್ರೀ ಕೆ. ಜೆ. ರಾವ್ ಅವರಿಗೂ ಕೊಡಲ್ಪಟ್ಟಿತು. ಜಸ್ಟಿಸ್ ಶ್ರೀ ಬಿ. ಎನ್. ಶ್ರೀಕೃಷ್ಣ ಅವರು ಪ್ರಶಸ್ತಿಯನ್ನು ವಿತರಿಸಿದರು. ಕಾಲನಿರ್ಣಯದ ಶ್ರೀ ಜ್ಯೋತಿ ಭಾಸ್ಕರ ಜಯಂತ ಸಲಗಾಂವ್‌ಕರ್ ಅಧ್ಯಕ್ಷತೆ ವಹಿಸಿದ್ದರು. ಇದರೊಂದಿಗೆ ಕರ್ನಾಟಕ ಸಂಘದ ಕಲಾ ಭಾರತಿಯ ನಾಲ್ಕನೇ ವಾರ್ಷಿಕೋತ್ಸವದ ಅಂಗವಾಗಿ ಶ್ರೀಮತಿ ಸಂಗೀತ ಶಂಕರ್ ಅವರ ವಯೋಲಿನ್ ವಾದನ, ಶ್ರೀಮತಿ ವೈಜಯಂತಿ ಕಾಶಿ ಅವರಿಂದ ಕೂಚಿಪುಡಿ, ಮರಾಠಿಯ ಸಂಗೀತ ಸ್ವಯಂವರ ಮಂಡಳಿಯವರಿಂದ ಸಂಗೀತ ನಾಟಕ ವಿಜೃಂಭಣೆಯಿಂದ ನಡೆಯಿತು.

ಕರ್ನಾಟಕ ಸಂಘದ ಸಂಚಾರಿ ಗ್ರಂಥಾಲಯ ಆರು ತಿಂಗಳ ಕಾಲ ಯಶಸ್ವಿಯಾಗಿ ಸೇವೆ ಸಲ್ಲಿಸಿದ ಸಂದರ್ಭದಲ್ಲಿ ಶ್ರೀ ಲಿಂಗರಾಜ್ ಪಾಟೀಲ್‌ರ ಅಧ್ಯಕ್ಷತೆಯಲ್ಲಿ ಒಕ್ಕೂಟ ನಡೆಯಿತು. ಮುಂದಕ್ಕೆ ಮುನಿಸಿಪಲ್ ಕನ್ನಡ ಶಾಲೆಯ ವಿದ್ಯಾರ್ಥಿಗಳ ಪ್ರತಿಭಾ ವಿಕಾಸಕ್ಕೆ ಕಮ್ಮಟ ನಡೆಸುವ ಯೋಜನೆ ಹಾಕಿಕೊಂಡಿದೆ.

## ನವ್ಯಕಾವ್ಯಕ್ಕೆ ತನ್ನದೇ ಆದ ವೈಶಿಷ್ಟ್ಯಗಳಿವೆ

- ಅರವಿಂದ ನಾಡಕರ್ಣಿ

ನವ್ಯಕಾವ್ಯದಲ್ಲಿ ಯಾವುದನ್ನೂ ಬಿಡಿಸಿ ಹೇಳುವಂತಿಲ್ಲ, ಅಲ್ಲಿ ಹೇಳುವುದೆಲ್ಲವನ್ನೂ ಸಂಗ್ರಹ ರೂಪದಲ್ಲಿ ಪ್ರತಿಮಾತ್ಮಕ, ರೂಪಕಾತ್ಮಕ ಪದ ಪುಂಜಗಳಲ್ಲಿ ಅಭಿವ್ಯಕ್ತಿ ಪಡಿಸಬೇಕಾಗುತ್ತದೆ. ಆದ್ದರಿಂದ ನವ್ಯಕಾವ್ಯ ಮೇಲ್ನೋಟಕ್ಕೆ ಕಾಣುವಷ್ಟು ಸಲೀಸಲ್ಲ ಎಂದು ಹಿರಿಯ ಕವಿ, ವಿಮರ್ಶಕ ಅರವಿಂದ ನಾಡಕರ್ಣಿ ಅವರು ಅಭಿಪ್ರಾಯ ಪಟ್ಟರು. ಅವರು ಇತ್ತೀಚೆಗೆ ಮುಂಬಯಿ ವಿ. ವಿ. ಕನ್ನಡ ವಿಭಾಗದಲ್ಲಿ ವಿಶೇಷ ಉಪನ್ಯಾಸ ನೀಡುತ್ತಾ ನವ್ಯಕಾವ್ಯವನ್ನು ಓದಿ ಅರ್ಥೈಸಿಕೊಳ್ಳುವ ಬಗೆಯನ್ನು ವಿವರಿಸಿದರು. ನವ್ಯಕಾವ್ಯದ ಭಾಷೆ, ಅಲ್ಲಿನ ತಂತ್ರ, ರೂಪಕ, ಪ್ರತಿಮೆ, ಮತ್ತು ಪ್ರತಿರೂಪಕ, ಉದ್ಧೃತವಾಕ್ಯ ಇವೆಲ್ಲವೂ ಒಟ್ಟಾಗಿ ಒಂದು ಆಶಯಕ್ಕೆ ದುಡಿಯುತ್ತವೆ. ಈ ಕವಿತೆಗಳಲ್ಲಿ `ನಾನು' ಎಂಬವನು ಕವಿಯಲ್ಲಿ ಸ್ವಗತದಂತೆ ಅದು ಬರಬಹುದು. ಪಿರಮಿಡ್ ಆಕೃತಿಯಲ್ಲಿ ಎಲ್ಲ ಭಾವನೆಗಳೂ ಪೋಷಕವಾಗಿ ಬರುತ್ತವೆ. ನವ್ಯಕಾವ್ಯದ ಅಧ್ಯಯನದ ಸಂದರ್ಭದಲ್ಲಿ ಇದನ್ನೆಲ್ಲ ಗಮನಿಸದೇ ಹೋದರೆ ಕಾವ್ಯದ ತಿರುಳು ಅರಿವಾಗದೇ ಹೋಗಬಹುದು ಎಂದವರು ಹೇಳಿದರು.

ನವ್ಯಕಾವ್ಯವನ್ನು ದಾಟಿ ಬದಲಿಸಿ ವ್ಯಂಗ್ಯವಾಗಿ ಓದಿದರೆ ಬೇರೆ ಅರ್ಥ ಕೊಡುತ್ತದೆ. ಕೆಲವೊಮ್ಮೆ ಕಾಕುವಿನ ಬಳಕೆಯೂ ಅಗತ್ಯವಾಗುತ್ತದೆ. ಗಂಭೀರವಾದುದನ್ನು ಲಘು ದಾಟಿಯಿಂದ ಅರ್ಥಾತ್ ನಿಮ್ನೋಕ್ತಿಯಿಂದ ಹೇಳಬೇಕಾಗುತ್ತದೆ. ರಾಮಾನುಜನ್ ಅವರ ಕಾವ್ಯದಲ್ಲಿ ಈ ಮಾದರಿಯನ್ನು ಕಾಣುತ್ತೇವೆ. ಅಡಿಗರ ಕಾವ್ಯದಲ್ಲಿ ಭಾವಾವೇಶ ಜಾಸ್ತಿ. ರಾಮಾನುಜನ್ ಅವರದು ಭಾವನೆ ಹಿಂಡಿದ ಕಾವ್ಯ ಎಂದವರು ಅಭಿಪ್ರಾಯ ಪಟ್ಟರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಡಾ। ತಾಳ್ತಜೆ ಅವರು ಅರವಿಂದ ನಾಡಕರ್ಣಿ ಅವರ ಕಾವ್ಯ ಶೈಲಿಯ ವೈಶಿಷ್ಟ್ಯತೆಯನ್ನು ಅಲ್ಲಿಯ ನಗರ ಪ್ರಜ್ಞೆ ಮೊದಲಾದ ಅಂಶಗಳನ್ನು ಸೋದಾಹರಣವಾಗಿ ವಿವರಿಸಿದರು. ಅಧ್ಯಕ್ಷತೆ ವಹಿಸಿದ ಡಾ। ಜಿ. ಡಿ. ಜೋಶಿ ಅವರು ಮಾತನಾಡುತ್ತಾ ನವ್ಯಕಾವ್ಯವನ್ನು ಓದಿ ಅರ್ಥೈಸುವ ಬಗೆಗೆ ಈ ರೀತಿಯ ಪ್ರಯತ್ನ ಈವತ್ತಿನ ಅಗತ್ಯವಾಗಿದೆ. ಕಾವ್ಯ ಮೇಲುನೋಟಕ್ಕೆ ಕೊಟ್ಟ ಅರ್ಥದಿಂದಲೇ ಅದರ ವ್ಯಾಖ್ಯಾನ ವಿಮರ್ಶೆಗೆ ಹೊರಟರೆ ಏನಾಗುತ್ತದೆ ಎಂಬುದನ್ನು ವಿವಿಧ ದೃಷ್ಟಾಂತಗಳಿಂದ ವಿವರಿಸಿದರು.

ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪ್ರೊ. ರಘುನಾಥ್, ಜಿ. ಎನ್. ಉಪಾಧ್ಯ, ಸಂಜೀವ್ ಕುಮಾರ್, ಮಲ್ಲಿಕಾರ್ಜುನ ಹೀರೇಮಠ ಮುಂತಾದವರು ಪಾಲ್ಗೊಂಡರು. ಆರಂಭದಲ್ಲಿ ಸೋಮಶೇಖರ್ ಅವರು ಸ್ವಾಗತ ಗೀತೆ ಹಾಡಿದರು. ಶ್ರೀ ಬಿರಾದಾರ್ ಅವರು ಅತಿಥಿಗಳನ್ನು ಪರಿಚಯಿಸಿದರೆ ಶ್ರೀ ಶ್ರೀನಾಥ್ ಎಂ. ಪಿ. ವಂದಿಸಿದರು.

## ಸಾಹಿತ್ಯ ಯಾವ ಜಾತಿಯ ಸ್ವತ್ತಲ್ಲ

- ಸನದಿ

ಸಾಹಿತ್ಯ ಯಾವ ಜಾತಿಯ ಸ್ವತ್ತಲ್ಲ. ಅದು ಮಾನವೀಯ ಮೌಲ್ಯವನ್ನು ಪ್ರತಿಪಾದಿಸುತ್ತದೆ. ಅರ್ಥಾತ್ ಅದು ಸಾರ್ವತ್ರಿಕವಾಗುವುದು ಈ ನೆಲೆಯಲ್ಲೇ. ಸಾಹಿತ್ಯ ಸಂಪರ್ಕದಿಂದ ಸಂಕುಚಿತ ದೃಷ್ಟಿಕೋನದಿಂದ ಹೊರಬಂದು ವಿಶಾಲ ದೃಷ್ಟಿಕೋನವನ್ನು ಬೆಳೆಸಿಕೊಳ್ಳುವುದು ಸಾಧ್ಯವಾಗುತ್ತದೆ ಎಂದು ಶ್ರೀ ಬಿ. ಎ. ಸನದಿ ಅವರು ಅಭಿಪ್ರಾಯ ಪಟ್ಟರು.

ಇತ್ತೀಚೆಗಷ್ಟೇ ಕರ್ನಾಟಕ ಸಾಹಿತ್ಯ ಅಕಾಡಮಿಯ ಗೌರವ ಪ್ರಶಸ್ತಿ ಪಡೆದ ಶ್ರೀ ಬಿ. ಎ. ಸನದಿ ಅವರೊಂದಿಗೆ ಮುಂಬಯಿ ವಿ. ವಿ.ಯ ಕನ್ನಡ ವಿಭಾಗವು ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಸಾಹಿತ್ಯ ಜನರನ್ನು ತಟ್ಟುವಂತಾಗಬೇಕು. ಕಾವ್ಯ ಮನಸ್ಸಿನ ಮಧ್ಯದ ಕೃತ್ರಿಮ ಗೋಡೆಗಳನ್ನು ಕೆಡಹಬಲ್ಲುದು. ಅದು ಮನುಷ್ಯನಲ್ಲಿ ಮಾನವೀಯತೆಯನ್ನು ತುಂಬುತ್ತದೆ. ತೀವ್ರ ಅನುಭವದಿಂದ ಮಾತ್ರ ಕಾವ್ಯಕ್ಕೆ ಒಳ್ಳೆಯ ಅಭಿವ್ಯಕ್ತಿ ಕೊಡಲು ಸಾಧ್ಯ ಎಂದು ತಾವು ಕವಿಯಾದ ಬಗೆಯನ್ನು ವಿವರಿಸಿದರು.

ಕವಿಯಾದವನು ಯಾವತ್ತೂ ತನ್ನ ಸುತ್ತ ಮುತ್ತಲಿನ ಆಗುಹೋಗುಗಳಿಗೆ ಸ್ಪಂದಿಸುತ್ತಿರಬೇಕು. ಕಾವ್ಯ ಆಕಾಶದಲ್ಲಿ ಅರಳಬಾರದು. ಅದು ಬರೇ ಆದರ್ಶದ ಬೆನ್ನು ಹತ್ತಿ ಹೋದರೆ ಏನನ್ನೂ ಸಾಧಿಸಲು ಸಾಧ್ಯವಾಗಲಾರದು ಎಂದು ನುಡಿದರು. ಇದೇ ಸಂದರ್ಭದಲ್ಲಿ ತಮ್ಮ ಹಲವಾರು ಕವಿತೆಗಳನ್ನು ಓದಿ ಕಾವ್ಯ ಓದುವ ಬಗೆ, ಅರ್ಥೈಸುವ ಬಗೆಯನ್ನು ವಿವರಿಸಿದರು.

ಪ್ರಾಸ್ತಾವಿಕ ಭಾಷಣ ಮಾಡಿದ ವಿಭಾಗದ ಮುಖ್ಯಸ್ಥ ಡಾ। ತಾಳ್ತಜೆ ವಸಂತ ಕುಮಾರ ಅವರು ಕವಿಯೊಡನೆ ಮುಖಾಮುಖಿಯಾಗಿ ನಡೆಸುವ ಈ ರೀತಿಯ ಸಂವಾದಗಳು ಕನ್ನಡದಲ್ಲಿ ಕಡಿಮೆ. ಕಾವ್ಯದ ರಸಗ್ರಹಣ, ಸೃಜನಶೀಲತೆಗಳನ್ನು ಅರ್ಥ ಮಾಡಿಕೊಳ್ಳಲು ಇಂತಹ ಪ್ರಯತ್ನಗಳು ನಡೆಯುತ್ತಿರಬೇಕು ಎಂದು ಆಶಯ ವ್ಯಕ್ತ ಪಡಿಸಿದರು.

ಆರಂಭದಲ್ಲಿ ಶ್ರೀ ಬೋರಾಳಕರ್ ಅವರು ಸ್ವಾಗತ ಗೀತೆಯನ್ನು ಹಾಡಿದರು. ಶ್ರೀ ಸಾಹು ಮಲ್ಲಿನಾಥ್ ಅವರು ಅತಿಥಿಯನ್ನು ಪರಿಚಯಿಸಿದರೆ ಶ್ರೀ ಜಿ. ಎನ್. ಉಪಾಧ್ಯ ಅವರು ವಂದಿಸಿದರು.

### ಆಶಾವಾದಿ

ಬಂಜರು ಬಯಕೆಗಳ
ಹುಸಿ ರಾತ್ರಿಯಲ್ಲೂ
ಭರವಸೆಯ ಬದುಕಿನ
ಕನಸು ಕಾಣುವವ.

### ಹೃದಯಾಘಾತ

ಬಾಳಿನ
ಪಯಣದಲ್ಲಿ
ದಣಿವಾಗಿ,
ಹೃದಯ ವಿಶ್ರಾಂತಿ
ಬಯಸಿದಾಗ.

- ರವೀಂದ್ರ ಟಿ. ಶೆಟ್ಟಿ
ಕಾಲ್ತೋಡು.



ಅಸೋಸಿಯೇಷನ್ನಿನ ಸದಸ್ಯರು ಫೆಬ್ರವರಿ 24, 25, ರಂದು ಅಲಿಬಾಗ್‌ಗೆ Picnic ಹೋಗಿದ್ದರು
ಆಗ ತೆಗೆದ ಕೆಲವು ಚಿತ್ರಗಳು




## STATEMENT ABOUT OWNERSHIP AND OTHER PARTICULARS OF NESARU TINGALOLE

| | | | |
|---|---|---|---|
| 1. | Place of Publication | : | Mumbai |
| 2. | Periodicity of Publication | : | Monthly |
| 3. | Printer's Name | : | Aarati Art Printers |
| | Citizenship | : | India |
| | Address | : | 101, Varma Chambers, 11, Homji Street, Fort, Mumbai-400 001. |
| 4. | Publisher's Name | : | M. A. N. Prasad |
| | Citizenship | : | Indian |
| | Address | : | C/o. The Mysore Association, 393, Bhaudaji Road, Matunga, Mumbai-400 019. |
| 5. | Editor's Name | : | M. A. N. Prasad |
| | Citizenship | : | Indian |
| | Address | : | C/o. The Mysore Association, 393, Bhaudaji Road, Matunga, Mumbai-400 019. |
| 6. | Name & Address of the Owner of Newspaper | : | The Mysore Association, 393, Bhaudaji Road, Matunga, Mumbai-400 019. |

I, M. A. N. Prasad hereby declare that the particulars given above are true to the best of my knowledge and belief.


## MATRIMONIALS

Alliance invited for a Bride smart good looking slim well educated Graduate Electronics/ Computer Science/Commerce. Willing to settle in USA age upto 22 years Brahmin height 5' 7". Apply with details to Nesaru Box No. 110.

***

Parents of Kannada Madhawa boy 28, 173 cm (5'9"), B.E. (MECH.), M.S. (MECH.), U.S.A. employed in U.S.A. with H.I. visa. Invite proposals from girls, fair, tall, B.E. (Computer Science), M.C.A., Computer Professionals. Apply with details to Nesaru Box No. 111.

***

Alliance invited from Kannada Brahmin girls, fair and good looking age between 22 & 25, technically qualified for Smartha Brahmin boy aged 28 years height 5' 6" working in USA as a Computer Engineer, Bharadwaj Gotra boy coming to India in April early marriage. Apply to Nesaru Box No. 112.

***

Smartha Brahmin parents Vathula Gothra hailing from Karnataka settled in Bombay for more than six decades seek alliance for their daughter Post Graduate (M.Sc.) lecturer. Age 28, Height 5' 1". Nakshatra Revati. Smart, charming personality, progressive outlook home loving. Well qualified professionals, well settled Brahmin boys aged upto 33 years may please reply to Nesaru Box No. 109.

***

Alliance invited for a girl. Date of Birth 30-01-1962. Koushika Gotra, Vishaka Nakshtra, Vrishika Rashi, Smartha Brahmin. Height 5' 1". Employed in Bombay as Junior Scientist. Post Graduate in Science Education. Reply to Nesaru Box No. 106.

Edited, Printed & Published by M.A.N. Prasad on behalf of the Mysore Association, Mumbai- Tel.: 402 46 47
Laser Typset and Printed at Aarati Art Printers, Fort, Mumbai-400 001. * Tel.: 266 33 61/266 59 38